ಸಂಪುಟ: 01 ಸಂಚಿಕೆ: 02 ಪುಟ: 04 ಬೆಲೆ: 02 ಶುಕ್ರವಾರ ಜೂನ್ 05 2026 ಮೊ: 7411699198/7406928404

# ಅಜಾತ ಶತ್ರು

ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ

ಸತ್ಯದ ಧ್ವನಿ... ಜನರ ನುಡಿ....

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue:02 Pages:04 Price:02 FRIDAY JUNE 05 2026 RNI NO: KNKAN/26/A4008 E-mail:ajathashathru2026@gmail.com

## 2ನೇ ಪಟ್ಟಿಯಲ್ಲಿ ಸಚಿವ ಸ್ಥಾನ ಸಿಗಬಹುದು: ಸಂತೋಷ್ ಲಾಡ್ ವಿಶ್ವಾಸ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಸಚಿವ ಸಂಪುಟ ವಿಸ್ತರಣೆಯ ಎರಡನೇ ಪಟ್ಟಿಯಲ್ಲಿ ತಮಗೆ ಅವಕಾಶ ನೀಡುವ ಸಾಧ್ಯತೆ ಇದೆ ಎಂದು ಮಾಜಿ ಸಚಿವ ಸಂತೋಷ್‌ಲಾಡ್ ಹೇಳಿದ್ದಾರೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೂತನ ಸಂಪುಟದ ಸಚಿವರಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.**



ಮೊದಲ ಪಟ್ಟಿಯಲ್ಲಿ ತಮ ಹೆಸರಿಲ್ಲದೇ ಇರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಸಾರ್ವಜನಿಕ ಜೀವನದಲ್ಲಿ ಇದೆಲ್ಲಾ ಸಹಜ. ರಾಜ್ಯದಲ್ಲಿ ಕೋಟ್ಯಂತರ ಜನರಿದ್ದಾರೆ. ಅವರ ಪೈಕಿ ನಮಗೆ ಸಚಿವರಾಗುವ ಅವಕಾಶ ಸಿಕ್ಕಿತ್ತು ಅದಕ್ಕೆ ಖುಷಿ ಪಡಬೇಕು, ಅವಕಾಶ ಸಿಕ್ಕಾಗ ಕೆಲಸ ಮಾಡಬೇಕು. ಸಿಗದೇ ಇದ್ದಾಗ ಕುಗ್ಗಬಾರದು ಎಂದು ಹೇಳಿದರು. ಕಾರ್ಮಿಕ ಸಚಿವನಾಗಿ ಎಲ್ಲರಂತೆ ನಾನು ಸಕ್ರಿಯವಾಗಿ ಕೆಲಸ ಮಾಡಿದ್ದೇನೆ. ಎರಡನೇ ಹಂತದ ಸಂಪುಟ ವಿಸ್ತರಣೆಯಲ್ಲಿ ತಮಗೆ ಅವಕಾಶ ಸಿಗಲಿದೆ ಎಂಬ ವಿಶ್ವಾಸವಿದೆ. ಆದರೆ ಈ ಬಗ್ಗೆ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧ ಎಂದರು. ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ತಮ ಹೆಸರು ಕೇಳಿಬಂದಿರುವುದಕ್ಕೆ ಹೆಮೆ ಇದೆ. ನನ್ನ ಹೆಸರು ಆ ಮಟ್ಟಕ್ಕೆ ಬೆಳೆದಿರುವ ಬಗ್ಗೆ ಸಂತೋಷದ ವಿಚಾರ. ಹಿರಿಯ ನಾಯಕ ಬಿ.ಕೆ.ಹ–ರಿಪ್ರಸಾದ್ ಕೆಪಿಸಿಸಿ ಅಧ್ಯಕ್ಷರಾಗಿರುವುದು ವೈಯಕ್ತಿಕವಾಗಿ ನನಗೆ ಸಂತಸ ತಂದಿದೆ ಎಂದು ತಿಳಿಸಿದರು.

# ಸಾಮೂಹಿಕ ನಾಯಕತ್ವದಲ್ಲೇ ಮುಂದುವರೆಯುವಂತೆ ಡಿಕೆಶಿಗೆ 'ಕೈ'ಕಮಾಂಡ್ ಕಟ್ಟುನಿಟ್ಟಿನ ಸೂಚನೆ

**ಬೆಂಗಳೂರು: ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳದೇ, ಸಾಮೂಹಿಕ ನಾಯಕತ್ವದಲ್ಲೇ ಮುನ್ನಡೆಯುವಂತೆ ಡಿ.ಕೆ.ಶಿವಕುಮಾರ್ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಕೆಲವು ವಿಚಾರಗಳಲ್ಲಿ ಡಿ.ಕೆ.ಶಿವಕುಮಾರ್ ಮುನ್ನುಗ್ಗುವ ಪ್ರವೃತ್ತಿ ಹೊಂದಿದ್ದು, ಸರಿ ಎನಿಸಿದ ವಿಚಾರಗಳಲ್ಲಿ ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳುವುದು ಸಹಜ ಪ್ರವೃತಿಯಾಗಿದೆ. ಹಲವಾರು ಸಂದರ್ಭಗಳಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿ ಪ್ರಮುಖ ಹಾಗೂ ಪ್ರಭಾವಿಗಳನ್ನೇ ಸಂಘಟನೆ ಚಟುವಟಿಕೆಯಿಂದ ಹೊರ ಹಾಕಿದ ಉದಾಹರಣೆಗಳಿವೆ.**

ತಮ ರಾಜಕೀಯ ವಿರೋಧಿಗಳ ಲೆಕ್ಕಾಚಾರ ಚುಕ್ತಾ ಮಾಡುವಲ್ಲಿಯೂ ಡಿ.ಕೆ.ಶಿವಕುಮಾರ್ ಎತ್ತಿದ ಕೈ. ಆದರೆ ಕಾಂಗ್ರೆಸ್ ಪಕ್ಷದ ಹಿತದೃಷ್ಟಿಯಿಂದ ಇದನ್ನು ನಿಯಂತ್ರಿಸಿಕೊಳ್ಳಬೇಕು. ಏಕಪಕ್ಷೀಯ ನಿರ್ಧಾರದ ಪ್ರವೃತ್ತಿ ಚುನಾವಣೆಯ ಮೇಲೆ ಗಾಢ ಪರಿಣಾಮ ಬೀರಲಿದೆ ಎಂಬ ಆತಂಕ ಹೈಕಮಾಂಡ್‌ಗೆ ಇದೆ. ಹೀಗಾಗಿ ಅತ್ಯಂತ ಎಚ್ಚರಿಕೆಯಿಂದ ಸೂಕ್ಷ್ಮ, ನಯ–ನಾಜೂಕು ನಿರ್ಧಾರಗಳನ್ನು ಪಾಲಿಸುವಂತೆ ವರಿಷ್ಠ ನಾಯಕರು ಹಿತ ಬೋಧನೆ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ, ಪ್ರಮುಖವಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರೆಯುವಂತೆ ವಿಶೇಷ ಸೂಚನೆ ನೀಡಲಾಗಿದೆ.

ಎರಡು ಬಾರಿ ರಾಜ್ಯದಲ್ಲಿ ಕಾಂಗ್ರೆಸ್‌ನ ಗೆಲುವಿಗೆ ಸಿದ್ದರಾಮಯ್ಯ ಅವರ ಕೊಡುಗೆಯನ್ನು ಕಡೆಗಣಿಸುವಂತಿಲ್ಲ. ಮುಂದಿನ ಚುನಾವಣೆಯಲ್ಲಿ ಅವರ ಮಾರ್ಗದರ್ಶನ ಮತ್ತು ನಾಯಕತ್ವ ಪಕ್ಷಕ್ಕೆ ಅಗತ್ಯ ಇದೆ. ಯಾವುದೇ ಸಂದರ್ಭದಲ್ಲೂ ಸಿದ್ದರಾಮಯ್ಯ ಮತ್ತು ಅವರ ಬೆಂಬಲಿಗರ ಹಿತರಕ್ಷಣೆಗೆ ಧಕ್ಕೆಯಾಗದಂತೆ ನಡೆದುಕೊಳ್ಳುವಂತೆ ತಾಕೀತು ಮಾಡಿರುವುದಾಗಿ ತಿಳಿದು ಬಂದಿದೆ. ಡಿ.ಕೆ.ಶಿವಕುಮಾರ್ ಅವರ ಸಂಪುಟಕ್ಕೆ 13 ಮಂದಿ ಸಚಿವರ ಸೇರ್ಪಡೆಯಾಗಿದೆ. ಇನ್ನೂ 20 ಸ್ಥಾನಗಳು ಖಾಲಿ ಇವೆ. ನಿಗಮ ಮಂಡಳಿಗಳಲ್ಲಿ ಸುಮಾರು



60ಕ್ಕೂ ಹೆಚ್ಚು ಹುದ್ದೆಗಳು ತೆರವಾಗಲಿದ್ದು, ಅವುಗಳಿಗೆ ನೇಮಕಾತಿಯಾಗಬೇಕಿದೆ. ಬಿಬಿಎಂಪಿ ಚುನಾವಣೆಯಲ್ಲಿ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲೂ ಎಚ್ಚರಿಕೆ ವಹಿಸಬೇಕಿದೆ ಎಂದು ಚರ್ಚೆಯಾಗಿದೆ.

ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಹಿಂದುಳಿದ ಈಡಿಗ ಸಮುದಾಯದ ಬಿ.ಕೆ.ಹರಿಪ್ರಸಾದ್ ಅವರಿಗೆ ನೀಡಲಾಗಿದೆ. ಅದರ ಜೊತೆಯಲ್ಲಿ ಅಹಿಂದ ನಾಯಕತ್ವಕ್ಕೆ ಸಿದ್ದರಾಮಯ್ಯ ಅವರ ಉಪಸ್ಥಿತಿ ಅತಿ ಮುಖ್ಯವಾಗಿದೆ ಎಂದು ಭಾವಿಸಲಾಗಿದೆ. ಬಿ.ಕೆ.ಹರಿಪ್ರಸಾದ್, ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ್, ವೀರಶೈವ ಲಿಂಗಾಯತ ಸಮುದಾಯದ ಈಶ್ವರ್ ಖಂಡ್ರೆ ಸೇ–ರಿದಂತೆ ಇತರ ನಾಯಕರ ಜೊತೆ ಸಮನ್ವಯದಿಂದ ಕರ್ತವ್ಯ ನಿರ್ವಹಿಸಬೇಕೆಂದು ಎಚ್ಚರಿಕೆ ನೀಡಲಾಗಿದೆ. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುವವರೆಗೂ ಯಾವ ರೀತಿ ಸೌಹಾರ್ದತೆಯನ್ನು ಕಾಯ್ದುಕೊಳ್ಳಲಾಗಿ–ತ್ತೋ ಅದೇ ಮಾದರಿಯನ್ನು ಮುಂದುವರಿಸಬೇಕು. ಸಂಪುಟ ವಿಸ್ತರಣೆ ಬಳಿಕ ಒಂದಿಷ್ಟು ಅಸಮಾಧಾನಗಳು ಕಂಡು ಬರಬಹುದು. ಶಾಸಕರ ಜೊತೆ ವ್ಯಕ್ತಿಗತ ಸಂಪರ್ಕ ಕಾಯ್ದುಕೊಳ್ಳುವ ಮೂಲಕ ಸರ್ಕಾರದ ಅಸ್ತಿತ್ವಕ್ಕೆ ಧಕ್ಕೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸೂಚಿಸಿರುವುದಾಗಿ ಮೂಲಗಳು ತಿಳಿಸಿವೆ. ಸಚಿವರಿಗೆ ಅವರ ಇಲಾಖೆಗಳಲ್ಲಿ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಡಬೇಕು. ಏಕಪಕ್ಷೀಯವಾದ ನಿರ್ಧಾರ ಮತ್ತು ಅನಪೇಕ್ಷಣೀಯವಾದ ಹಸ್ತಕ್ಷೇಪಗಳನ್ನು ನಿಯಂತ್ರಿಸುವ ಅಗತ್ಯ ಇದೆ ಎಂದು ಹೇಳಲಾಗಿದೆ. 2028ರ ವಿಧಾನಸಭೆ 2029ರ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಣೆ ಮಾಡಿ, ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ತೀವ್ರ ನಿಗಾ ಇರಲಿ, ಕಾಲ ಕಾಲಕ್ಕೆ ಜನಾಭಿಪ್ರಾಯಗಳನ್ನು ಸಂಗ್ರಹಿಸಿ, ಜನಸ್ನೇಹಿ ಆಡಳಿತ ನಡೆಸಬೇಕು ಎಂದು ಹಿರಿಯ ನಾಯಕರು ಹಿತವಚನ ನೀಡಿದ್ದಾರೆ ಎಂದು ತಿಳಿದು ಬಂದಿದೆ ಎಂದರು.

## ಹರಿಪ್ರಸಾದ್ ಕೆಪಿಸಿಸಿ ಅಧ್ಯಕ್ಷರಾದ ಬಳಿಕ ರಾಜ್ಯದಲ್ಲಿ ಮತ್ತೊಂದು ಶಕ್ತಿ ಕೇಂದ್ರ ಸೃಷ್ಟಿ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಬಿ.ಕೆ.ಹರಿಪ್ರಸಾದ್ ಕಾಂಗ್ರೆಸ್ ಅಧ್ಯಕ್ಷರಾದ ಬಳಿಕ ರಾಜ್ಯದಲ್ಲಿ ಮತ್ತೊಂದು ಶಕ್ತಿಕೇಂದ್ರ ಸೃಷ್ಟಿಯಾದಂತಾಗಿದೆ. ಇಂದು ಬೆಳಗ್ಗೆಯಿಂದಲೂ ಕಾಂಗ್ರೆಸ್‌ನ ಸಚಿವರ ಶಾಸಕರ ದಂಡು, ಹ–ರಿಪ್ರಸಾದ್ ಅವರ ಮನೆಗೆ ಭೇಟಿ ನೀಡಿ ಶುಭ ಹಾರೈಸುತ್ತಿದೆ. ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್, ಸಚಿವರಾದ ಕೃಷ್ಣಬೈರೇಗೌಡ, ಎಂ.ಬಿ.ಪಾಟೀಲ್, ಯು.ಟಿ.ಖಾದರ್, ಭೈರತಿ ಸುರೇಶ್, ಮಾಜಿ ಸಚಿವ ಸಂತೋಷ್ ಲಾಡ್ ಸೇರಿದಂತೆ ಹಲವಾರು ಮಂದಿ ಬಿ.ಕೆ.ಹರಿಪ್ರಸಾದ್ ಮನೆಗೆ ಭೇಟಿ ನೀಡಿದ್ದಾರೆ.**



ರಾಜ್ಯ ಕಾಂಗ್ರೆಸ್‌ನಲ್ಲಿ ಈಗಾಗಲೇ ಮೂರ್ನಾಲ್ಕು ಶಕ್ತಿಕೇಂದ್ರಗಳಿವೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿರುವವರೆಗೂ ಪಕ್ಷ ಹಾಗೂ ಆಡಳಿತದ ಮೇಲೆ ಅವರ ಹಿಡಿತ ಪ್ರಬಲವಾಗಿತ್ತು. ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿರುವುದರಿಂದ ಮತ್ತೊಂದು ಶಕ್ತಿ ಕೇಂದ್ರ ಸಕ್ರಿಯವಾಗಿ–ತ್ತು. ಈ ನಡುವೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯದವರೇ ಆಗಿರುವುದರಿಂದ ಅನಾಯಸವಾಗಿ ಮತ್ತೊಂದು ಶಕ್ತಿ ಕೇಂದ್ರ ಚಾಲ್ತಿಯಲ್ಲಿತ್ತು. ಬಿ.ಕೆ.ಹರಿಪ್ರಸಾದ್ ಕಾಂಗ್ರೆಸ್ ಹೈಕಮಾಂಡ್ ನಾಯಕರ ಆಪ್ತ ಬಳಗದಲ್ಲಿದ್ದರು. ಮತ್ತೊಂದು ಶಕ್ತಿಕೇಂದ್ರವಾಗಿ ಗುರುತಿಸಿಕೊಂಡಿರಲಿಲ್ಲ. ಒಂದು ಕಾಲದಲ್ಲಿ ಡಿ.ಕೆ.ಶಿವಕುಮಾರ್ ಅವರ ಆಪ್ತ ಮಿತ್ರರಾಗಿದ್ದರು. ರಾಜಕೀಯ ಬೆಳವಣಿಗೆಗಳಲ್ಲಿ ತೆರೆಮರೆಯಲ್ಲಿ ವಿರೋಧಿ ಗುಂಪಿನಲ್ಲಿ ಕಾಣಿಸಿಕೊಂಡಿದ್ದರು. ಆದ–ರೆ ಇಬ್ಬರೂ ಮೂಲ ಕಾಂಗ್ರೆಸ್ಸಿಗರು ಮತ್ತು ಪಕ್ಷದ ನಿಷ್ಠಾವಂತ ಶಿಸ್ತಿನ ಶಿಪಾಯಿಗಳು ಎಂಬುದರಲ್ಲಿ ಎರಡು ಮಾತಿಲ್ಲ. ನಿನ್ನೆ ಅಧ್ಯಕ್ಷರಾಗಿ ನೇಮಕವಾಗಿರುವ ಬಿ.ಕೆ.ಹರಿಪ್ರಸಾದ್, ಇಂದು ಮಾಧ್ಯಮಗಳಿಗೆ ಹೇಳಿಕೆ ನೀಡಿ ಅಧಿಕಾರ ಬೇಕಾದವರು ಡಿ.ಕೆ.ಶಿವಕುಮಾರ್ ಬಳಿ ಹೋಗಲಿ, ಪಕ್ಷದ ಸಂಘಟನೆಯನ್ನು ಸದೃಢಗೊಳಿಸಬೇಕು ಎಂಬ ಆಸಕ್ತಿ ಹೊಂದಿರುವವರು ತಮೊಂದಿಗೆ ಬರಲಿ ಎಂದು ನೇರವಾಗಿ ಹೇಳಿದ್ದಾರೆ.

# ಕಾರಟಗಿಯಲ್ಲಿ ಕೆಆರ್‌ಎಸ್ ಪಕ್ಷದ ಲಂಚಮುಕ್ತ ಅಭಿಯಾನ.

## ಪೊಲೀಸ್ ಠಾಣೆ ಹಾಗೂ ಪುರಸಭೆಗೆ ಮನವಿ ಸಲ್ಲಿಕೆ.

ಅ.ಶ. ಸುದ್ದಿ ಕಾರಟಗಿ

**ಕಾರಟಗಿ: ತಾಲೂಕಿನ ಪೊಲೀಸ್ ಠಾಣೆ ಮತ್ತು ಪುರಸಭೆಯಲ್ಲಿ ಇಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ವತಿಯಿಂದ "ಲಂಚಮುಕ್ತ ಕರ್ನಾಟಕ" ಅಭಿಯಾನವನ್ನು ಹಮ್ಮಿಕೊಳ್ಳಲಾಯಿತು. ಸಾರ್ವಜನಿಕರಿಗೆ ಸರ್ಕಾರಿ ಕಚೇರಿಗಳಲ್ಲಿ ಯಾವುದೇ ಕೆಲಸಕ್ಕಾಗಿ ಲಂಚ ನೀಡುವ ಅಥವಾ ಪಡೆಯುವ ಪರಿಸ್ಥಿತಿ ನಿರ್ಮಾಣವಾಗಬಾರದು.**

ಸರ್ಕಾರಿ ಸೇವೆಗಳು ಪಾರದರ್ಶಕವಾಗಿ ಮತ್ತು ಸಮಯಕ್ಕೆ ಸರಿಯಾಗಿ ದೊರೆಯಬೇಕು ಎಂಬ ಉದ್ದೇಶದಿಂದ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಪೊಲೀಸ್ ಠಾಣೆ ಮತ್ತು ಪುರಸಭೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಕೆ ಆರ್ ಎಸ್ ಪಕ್ಷದ ಯುವ ಮುಖಂಡ ನಿರುಪಾದಿ ಕೆ ಗೊಮರ್ಸಿ ಅವರು ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಭ್ರಷ್ಟಾಚಾರ ಮತ್ತು ಲಂಚದ ಹಾವಳಿಯಿಂದ ಸಾಮಾನ್ಯ ಜನರು ಸಂಕಷ್ಟ ಅನುಭವಿಸುತ್ತಿದ್ದಾರೆ.

ಜನಸಾಮಾನ್ಯರ ಹಕ್ಕಿನ ಸೇವೆಗಳನ್ನು ಪಡೆಯಲು ಅನಗತ್ಯ



ವಿಳಂಬ ಹಾಗೂ ಹಣದ ಬೇಡಿಕೆಗಳು ಕಂಡುಬರುತ್ತಿವೆ.ಇಂತಹ ದುಷ್ಪ್ರವೃತ್ತಿಗಳನ್ನು ತಡೆಯಲು ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಪೊಲೀಸ್ ಠಾಣೆಯಲ್ಲಿ ದೂರುಗಳ ಸ್ವೀಕಾರ, ತನಿಖೆ ಹಾಗೂ ಸಾರ್ವಜನಿಕರೊಂದಿಗೆ ನಡೆದುಕೊಳ್ಳುವ ವಿಚಾರದಲ್ಲಿ ಪಾರದರ್ಶಕತೆ ಕಾಪಾಡಬೇಕು. ಪುರಸಭೆಯಲ್ಲಿ ತೆರಿಗೆ, ಖಾತೆ, ಪರವಾನಗಿ, ಕುಡಿಯುವ ನೀರು ಹಾಗೂ ಇತರೆ ನಾಗರಿಕ ಸೇವೆಗಳನ್ನು ಯಾವುದೇ ಲಂಚವಿಲ್ಲದೆ ಒದಗಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು.

ಹಾಗೂ ಕೆಆರ್‌ಎಸ್ ಪಕ್ಷವು ರಾಜ್ಯಾದ್ಯಂತ ಲಂಚಮುಕ್ತ ಅಭಿಯಾನವನ್ನು ಮುಂದುವರಿಸಲಿದ್ದು, ಭ್ರಷ್ಟಾಚಾರದ ವಿರುದ್ಧ ಜನಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕೆಆರ್‌ಎಸ್ ಪಕ್ಷದ ರಾಜ್ಯ ರೈತ ಘಟಕದ ಕಾರ್ಯದರ್ಶಿ ಕನಕಪ್ಪ ಉಡೆಜಾಲಿ ಕೊಪ್ಪಳ ಜಿಲ್ಲಾ ಸಂಚಾಲಕರಾದ ಗಣೇಶ್ ಅಮೃತ್, ಉಮೇಶ್ ಕುಮಾರ್ ಸಾರಂಗಿ, ಮೈನುದ್ದೀನ್, ಶಾಮಿದ ಅಲಿ ಹುಲಿ ಹೈದರ್,ಹನುಮಂತಪ್ಪ , ಹನುಮೇಶ್, ಅಮಾಂತಪ್ಪ ಜೂಲ್ ಕುಂಟೆ, ಸೇರಿದಂತೆ ಸ್ಥಳೀಯ ಘಟಕದ ಪದಾಧಿಕಾ–ರಿಗಳು, ಕಾರ್ಯಕರ್ತರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

# ಹಿರೇಮ್ಯಾಗೇರಿ ನರೇಗಾ ಕೂಲಿಕಾರರಿಗೆ ಪಿಎಂ ಶ್ರಮಯೋಗಿ ಮಾನ್‌ಧನ್ ನೋಂದಣಿ ಅಭಿಯಾನ



ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಹಿರೇಮ್ಯಾಗೇರಿ ಗ್ರಾಮ ಪಂಚಾಯಿತಿಯಲ್ಲಿ ನರೇಗಾ ಕಾಮಗಾರಿ ಸ್ಥಳದಲ್ಲಿ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್‌ಧನ್ (PM-SYM) ಯೋಜನೆಯ ನೋಂದಣಿ ಅಭಿಯಾನ ನಡೆಯಿತು.**

**ಈ ವೇಳೆ ಮಾತನಾಡಿದ ಪಿಡಿಒ ಮಂಗಳಪ್ಪ ನಾಯಕ, ಅಸಂಘಟಿತ ವಲಯದ ಕಾರ್ಮಿಕರಿಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಈ ಯೋಜನೆಯಡಿ 60 ವರ್ಷಗಳ ನಂತರ ತಿಂಗಳಿಗೆ 3,000 ಖಚಿತ ಪಿಂಚಣಿ ದೊರೆಯಲಿದ್ದು, ಕೂಲಿಕಾರರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.**

ತಾಲೂಕು ಐಇಸಿ ಸಂಂ–ಯೋಜಕ ಶರಣಪ್ಪ ಹಾಳಕೇರಿ ಮಾತನಾಡಿ, ಫಲಾನುಭವಿಗಳು ಪಾವತಿಸುವಷ್ಟೇ ಮೊತ್ತವನ್ನು ಕೇಂದ್ರ ಸರ್ಕಾರವೂ ಜಮೆ ಮಾಡುತ್ತದೆ. ಫಲಾನುಭವಿಯ ಮರಣದ ಬಳಿಕ ಸಂಗಾತಿಗೆ ಶೇ.50 ಕುಟುಂಬ ಪಿಂಚಣಿ ದೊರೆಯಲಿದೆ ಎಂದು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಗ್ರಾಮ ಕಾಯಕ ಮಿತ್ರರು, ಕಾಯಕ ಬಂಧುಗಳು ಹಾಗೂ ನರೇಗಾ ಕೂಲಿಕಾರರು ಭಾಗವಹಿಸಿದ್ದರು.

# ಕೊಪ್ಪಳ ಕಾರ್ಯನಿರತ ಪತ್ರಕರ್ತರ ಸಂಘದ ಸಭೆ

## ಜುಲೈನಲ್ಲಿ ಅದ್ದೂರಿ ಪತ್ರಿಕಾ ದಿನಾಚರಣೆಗೆ ನಿರ್ಧಾರ ; ರಾಜು.ಬಿ.ಆರ್

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕೊಪ್ಪಳ ಜಿಲ್ಲಾ ಘಟಕದ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಸಹ ಜುಲೈ ಮೊದಲನೇ ಅಥವಾ ಎರಡನೇ ವಾರದಲ್ಲಿ ಅದ್ದೂರಿಯಾಗಿ ಪತ್ರಿಕಾ ದಿನಾಚರಣೆ ಆಚರಿಸಲು ನಿರ್ಧರಿಸಲಾಗಿದೆ. ಇಲ್ಲಿನ ಪತ್ರಿಕಾ ಭವನದಲ್ಲಿ ಗುರುವಾರ ಏರ್ಪಡಿಸಲಾಗಿದ್ದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಭೆಯ ಅಧ್ಯಕ್ಷತೆ ವಹಿಸಿದ್ದ ಕೇಂದ್ರ ಸ್ಥಾನದ ಜಿಲ್ಲಾ ಉಪಾಧ್ಯಕ್ಷ ರಾಜು ಬಿ.ಆರ್. ಅವರು ಈ ನಿರ್ಧಾರವನ್ನು ಪ್ರಕಟಿಸಿದರು. ಸಂಘದ ಜಿಲ್ಲಾಧ್ಯಕ್ಷ ಹನುಮಂತ ಹಳ್ಳಿಕೇರಿ ಅವರ ಅನುಪಸ್ಥಿತಿಯಲ್ಲಿ ಸಭೆ ಜರುಗಿತು.**

ಈ ಸಂದರ್ಭದಲ್ಲಿ ಮಾತನಾಡಿದ ರಾಜು ಬಿ.ಆರ್. ಅವರು, "ನಮ್ಮ ನಾಯಕ ಶಿವಾನಂದ ತಗೂಡೂರು ಅವರು ಮೂರನೇ ಬಾರಿಗೆ




ಸಂಘದ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವ ಶುಭ ಸಂದರ್ಭದಲ್ಲಿ ಅವರಿಗೆ ಅದ್ದೂರಿ ಸನ್ಮಾನ ಹಮ್ಮಿಕೊಳ್ಳಲಾಗುವುದು. ಇದರೊಂದಿಗೆ ಜಿಲ್ಲೆಯ ಅರ್ಹ ಪತ್ರಕರ್ತರಿಗೆ ದತ್ತಿ ನಿಧಿ ಪ್ರಶಸ್ತಿ ವಿತರಣೆ ಮಾಡಲಾಗುವುದು," ಎಂದು ತಿಳಿಸಿದರು. ಪತ್ರಿಕಾ ದಿನಾಚರಣೆಯ ಅಂಗವಾಗಿ ಪತ್ರಕರ್ತರಿಗೆ ಕ್ರೀಡಾಕೂಟ, ಪತ್ರಕರ್ತರ ಮಕ್ಕಳ ಪ್ರತಿಭಾ ಪುರಸ್ಕಾರ ಹಾಗೂ ಪತ್ರಕರ್ತರ ಕುಟುಂಬ ವರ್ಗದವರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಸೇರಿದಂತೆ ವಿವಿಧ ರಚನಾತ್ಮಕ ಕಾರ್ಯಕ್ರಮಗಳನ್ನು ಆಯೋಜಿಸುವ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ನಿರ್ಣಯಿಸಲಾಯಿತು. ಈ ಎಲ್ಲ ಕಾರ್ಯಕ್ರಮಗಳ ಯಶಸ್ವಿ ನಿರ್ವಹಣೆಗಾಗಿ ವಿವಿಧ ಉಪ ಸಮಿತಿಗಳನ್ನು ರಚಿಸಿ, ಜವಾಬ್ದಾರಿ ಹಂಚಿಕೆ ಮಾಡಲಾಯಿತು.

ಇದೇ ವೇಳೆ, ಯಶಸ್ವಿ ಚಿಕಿತ್ಸೆ ಪಡೆದು ಪ್ರಸ್ತುತ ವಿಶ್ರಾಂತಿ ಪಡೆಯುತ್ತಿರುವ ಸಂಘದ ಜಿಲ್ಲಾಧ್ಯಕ್ಷ ಹನುಮಂತ ಹಳ್ಳಿಕೇರಿ ಅವರು ಬೇಗ ಗುಣಮುಖರಾಗಿ, ಸಂಘದ ಚುಕ್ಕಾಣಿ ಹಿಡಿದು ಎಂದಿನಂತೆ ಕಾರ್ಯನಿರ್ವಹಿಸಲಿ ಎಂದು ಸಭೆಯಲ್ಲಿದ್ದವರೆಲ್ಲರೂ ಪ್ರಾರ್ಥಿಸಿದರು. ಸಂಘದ ಸರ್ವ ಸದಸ್ಯರ ಸಹಕಾರ, ಪ್ರೋತ್ಸಾಹ ಹಾಗೂ ಶುಭ ಹಾರೈಕೆಗಳು ಯಾವಾಗಲೂ ಅವರೊಂದಿಗೆ ಇರಲಿವೆ ಎಂದು ಆಶಿಸಿದರು. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೈ. ನಾಗರಾಜ ಅವರು ಸಭೆಯ ಕಾರ್ಯಕಲಾಪಗಳನ್ನು ನಿರ್ವಹಿಸಿದರು. ವೇದಿಕೆಯ ಮೇಲೆ ಕೇಂದ್ರ ಸ್ಥಾನದ ಜಿಲ್ಲಾ ಕಾರ್ಯದರ್ಶಿ ರುದ್ರಗೌಡ ಪಾಟೀಲ್ ಉಪಸ್ಥಿತರಿದ್ದರು.

ಸಭೆಯಲ್ಲಿ ಹಿರಿಯ ಸದಸ್ಯರಾದ ಜಿ. ಎಸ್. ಗೋನಾಳ್, ಎಚ್.ಎಸ್. ಹರೀಶ್, ಎಂ. ಸಾದಿಕ್ ಅಲಿ, ಎನ್.ಎಂ. ದೊಡ್ಡಮನಿ, ಶಿವರಾಜ್ ನುಗಡೋಣಿ, ಕಲೀಲ್ ಉಡೇವು, ಧರ್ಮಣ್ಣ ಹಟ್ಟಿ, ಬ್ರಹ್ಮಾನಂದ ಬಡಿಗೇರ್, ಮಂಜುನಾಥ್ ಗೊಂಡಬಾಳ, ಶಿವಕುಮಾರ್ ಹಿರೇಮಠ, ಸಿದ್ದು ಹಿರೇಮಠ, ಎಂ.ಎನ್. ಕುಂದಗೋಳ, ಮಂಜುನಾಥ ಪೂಜಾರ್, ಉಮೇಶ್ ಪೂಜಾರ್, ಮೌಲಹುಸೇನ್ ಬುಲ್ಡಿಯಾರ್ ,ಅಂಜಿನೆಪ್ಪ, ಸೇರಿದಂತೆ ಜಿಲ್ಲೆಯ ಪ್ರಮುಖ ಪತ್ರಕರ್ತರು ಉಪಸ್ಥಿತರಿದ್ದರು.

# ನಿವೇಶನ ಹಾಗೂ ಹಕ್ಕುಪತ್ರಕ್ಕಾಗಿ ಜಿಲ್ಲಾಧಿಕಾರಿ ಕಚೇರಿವರೆಗೆ ಜಾಥಾ: ನಿರಾಶ್ರಿತ ಕುಟುಂಬಗಳ ಎಚ್ಚರಿಕೆ

ಅ.ಶ. ಸುದ್ದಿ ಗಂಗಾವತಿ

**ಕೊಪ್ಪಳ: ನಿವೇಶನ ರಹಿತ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ, ಗುನ್ನಳ್ಳಿ ಆಶ್ರಯ ನಿವೇಶನಗಳಿಗೆ ರಸ್ತೆ, ವಿದ್ಯುತ್ ಹಾಗೂ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವುದು ಮತ್ತು ಭಾಗ್ಯನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ 19ನೇ ವಾರ್ಡಿನ ಅಲೆಮಾರಿ ಸಿಂದೊಳ್ಳು ಸಮುದಾಯದ ಕುಟುಂಬಗಳಿಗೆ ನಿವೇಶನ ಒದಗಿಸುವಂತೆ ಒತ್ತಾಯಿಸಿ ವಸತಿ ನಿರಾಶ್ರಿತ ಹೋರಾಟ ಸಮಿತಿಯ ನೇತೃತ್ವದಲ್ಲಿ ಗುರುವಾರ ಜಿಲ್ಲಾಧಿಕಾರಿ ಕಚೇರಿವರೆಗೆ ಜಾಥಾ ನಡೆಸಿ ಮನವಿ ಸಲ್ಲಿಸಲಾಯಿತು.**

ಈ ಕುರಿತು ಸಮಿತಿಯ ಮುಖಂಡರು ಮಾತನಾಡಿ, 2023ರ ನವೆಂಬರ್ 15ರಿಂದ ವಿವಿಧ ಇಲಾಖೆಗಳು ಹಾಗೂ ನಗರಸಭೆಗೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಇದುವರೆಗೆ ಯಾವುದೇ ಶಾಶ್ವತ ಪರಿಹಾರ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಗರದ ಪ್ರವಾಸಿ ಮಂದಿರದಲ್ಲಿ ಬೆಳಿಗ್ಗೆ 10.20ಕ್ಕೆ




ವಿವಿಧ ದಲಿತ ಪರ, ಪ್ರಗತಿಪರ, ಕನ್ನಡ ಪರ ಹಾಗೂ ಅಲೆಮಾರಿ ಸಂಘಟನೆಗಳ ಮುಖಂಡರು ಹಾಗೂ ನಿರಾಶ್ರಿತ ಕುಟುಂಬಗಳು ಸೇರಿ ಅಶೋಕ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಜಾಥಾ ನಡೆಸಿದರು.

ಭಾಗ್ಯನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಗಾಂಧಿನಗರ, ಸಿದ್ದೇಶ್ವರ ನಗರ, ಕಾಳಿದಾಸ ನಗರ, ಕೂಗಮ್ಸ್ ನಗರ ಸೇ-ರಿದಂತೆ ಸುಮಾರು 40 ಕುಟುಂಬಗಳಿಗೆ ನಿವೇಶನ ಮತ್ತು ಹಕ್ಕುಪತ್ರ ನೀಡಬೇಕು. ಕುವೆಂಪುನಗರದ ಸುಮಾರು 20 ಕುಟುಂಬಗಳಿಗೆ ಫಾರ್ಮ್ ಸಂಖ್ಯೆ ಮಂಜೂರು ಮಾಡಬೇಕು. ಅಲ್ಲದೆ ಗುನ್ನಳ್ಳಿ ಆಶ್ರಯ ನಿವೇಶನದ ಕಾಮಗಾರಿ ಪೂರ್ಣಗೊಳಿಸಿ, ಆಯ್ಕೆಯಾದ ಫಲಾನುಭವಿಗಳಿಗೆ ತ್ವರಿತವಾಗಿ ಹಕ್ಕುಪತ್ರ ಹಾಗೂ ನಿವೇಶನ ಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದರು.

ಮೂರು ವರ್ಷಗಳಿಂದ ಕಾಯುತ್ತಿರುವ ಬಡ ಮತ್ತು ನಿರಾಶ್ರಿತ ಕುಟುಂಬಗಳಿಗೆ ಆಶ್ರಯ ಕಲ್ಪಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಹಾಗೂ ನಗರಸಭೆ ತುರ್ತು ಕ್ರಮ ಕೈಗೊಳ್ಳಬೇಕು. ಆಶ್ರಯ ಕಾಲೋನಿಗಳಲ್ಲಿ ಅರ್ಹರು ಹಾಗೂ ಅನರ್ಹರ ಕುರಿತು ಸಮಗ್ರ ಪರಿಶೀಲನೆ ನಡೆಸಿ, ಮೊದಲ ಹಂತದಲ್ಲಿ ಕುವೆಂಪುನಗರದಿಂದಲೇ ಪ್ರಾರಂಭಿಸಬೇಕು ಎಂದು ಆಗ್ರಹಿಸಿದರು. ಈ ಬೇಡಿಕೆಗಳ ಈಡೇರಿಕೆಗೆ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಅಧ್ಯಕ್ಷ ಚಂದ್ರಕಾಂತ್ ಕಾದ್ರೊಳ್ಳಿ, ಕರ್ನಾಟಕ ರಕ್ಷಣಾ ಯುವ ಪಡೆ ವೇದಿಕೆಯ ರಾಜ್ಯಾಧ್ಯಕ್ಷ ನಿಂಗು ಜಿ.ಎಸ್. ಬೇಡಿಕಲ್, ಆರ್. ವಿಜಯಕುಮಾರ್, ಕರುನಾಡು ಯುವ ಪ್ರಜಾ ವೇದಿಕೆಯ ಸಂಸ್ಥಾಪಕಿ ಶ್ರೀಮತಿ ಬಿಬಿಜಾನ್, ರಾಜ್ಯಾಧ್ಯಕ್ಷ ರಾಜು ಹೊಂಬಳ, ಕರ್ನಾಟಕ ರಾಜ್ಯ ಎಸ್‌ಸಿ-ಎಸ್‌ಟಿ ಅಲೆಮಾರಿ ಬುಡಕಟ್ಟು ಮಹಾಸಭೆಯ ಜಿಲ್ಲಾ ಅಧ್ಯಕ್ಷ ಸಂಜಯ್ ದಾಸ್ ಕೌಜಗೇರಿ, ಮೇಧಾರ್ ಸಂಘಟನೆ ಹಾಗೂ ಕರ್ನಾಟಕ ರಕ್ಷಣಾ ವೇದಿಕೆಯ ಎಚ್. ಶಿವರಾಮಗೌಡ ಸೇ-ರಿದಂತೆ ಜಿಲ್ಲೆಯ ಹಲವು ಸಂಘಟನೆಗಳ ಮುಖಂಡರು ಬೆಂಬಲ ವ್ಯಕ್ತಪಡಿಸಿದ್ದಾರೆ. ಬೇಡಿಕೆಗಳನ್ನು ಈಡೇರಿಸುವ ಕು-ರಿತು ಜಿಲ್ಲಾಡಳಿತದಿಂದ ಅಧಿಕೃತ ಆದ-ೇಶ ಹೊರಬರುವವರೆಗೆ ಧರಣಿ ಮತ್ತು ಸತ್ಯಾಗ್ರಹ ಮುಂದುವರಿಯಲಿದೆ ಎಂದು ಹೋರಾಟಗಾರರು ಎಚ್ಚರಿಕೆ ನೀಡಿದ್ದಾರೆ.

## ಖಾತೆ ಹಂಚಿಕೆ ಬಗ್ಗೆ ಇನ್ನೂ ಘೋಷಣೆ ಹೊರಬಿದ್ದಿಲ್ಲ ಮೋದಿ ಸರ್ಕಾರ ದೇಶದ ಚಿನ್ನವನ್ನು ಮಾರಾಟ ಮಾಡುತ್ತಿದೆ :ಪ್ರಿಯಾಂಕ್ ಖರ್ಗೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ರಾಜ್ಯ ಸಚಿವ ಸಂಪುಟದ ಖಾತೆ ಹಂಚಿಕೆ ಕು-ರಿತು ಇನ್ನೂ ಯಾವುದೇ ಅಧಿಕೃತ ನಿರ್ಧಾರವಾಗಿಲ್ಲ, ಬಹುಶಃ ಇಂದು ಸಂಜೆಯೊಳಗೆ ತೀರ್ಮಾನವಾಗಬಹುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಇಂದು ಸದಾಶಿವನಗರದಲ್ಲಿ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರನ್ನು ಭೇಟಿ ಮಾಡಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಪ್ರಿಯಾಂಕ್ ಖರ್ಗೆ ಅವರು, ಮುಖ್ಯಮಂತ್ರಿ ಅವರು ಸಂಜೆಯೊಳಗೆ ಖಾತೆ ಹಂಚಿಕೆ ಮಾಡುವುದಾಗಿ ತಿಳಿಸಿದ್ದಾರೆ. ಅಧಿಕೃತ ಘೋಷಣೆ ಬಳಿಕವೇ ಎಲ್ಲವೂ ಸ್ಪಷ್ಟವಾಗಲಿದೆ ಎಂದರು.**



ತಮಗೆ ಗೃಹ ಖಾತೆ ಸಿಗುತ್ತದೆ ಎಂಬ ವದಂತಿಯಿದೆ ಎಂದು ಕೇಳಿದಾಗ ಯಾವ ಹುದ್ದೆ ಮೇಲೂ ಅಲ್ಲ, ಕೀಳೂ ಅಲ್ಲ, ನಾಯಕರು ನೀಡಿದ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು, ಜನರ ಪರವಾಗಿ ಕೆಲಸ ಮಾಡಬೇಕು ಎಂದು ಹೇಳಿದರು. ವಿರೋಧ ಪಕ್ಷಗಳಲ್ಲಿ ಆತಂಕ ಆರಂಭವಾಗಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಯಾರೇ ಗೃಹ ಸಚಿವರಾದರೂ ಕಾನೂನು ಮತ್ತು ಸಂವಿಧಾನದ ಚೌಕಟ್ಟಿನಲ್ಲಿಯೇ ಕೆಲಸ ಮಾಡಬೇಕಾಗುತ್ತದೆ. ಕಾನೂನು ಹಾಗೂ ಸಂವಿಧಾನವನ್ನು ಮೀರಿ ಯಾರೂ ಏನನ್ನೂ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದರು. ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ವಿಜಯೇಂದ್ರ ಮತ್ತು ಆರ್. ಅಶೋಕ್ ಅವರ ಫೈಲ್‌ಗಳು ಹೊರಬರುತ್ತವೆ ಎಂದು ನೀಡಿರುವ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, ಅಂತಹ ಫೈಲ್‌ಗಳು ಇವೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅದನ್ನು ಯತ್ನಾಳ್ ಅವರನ್ನೇ ಕೇಳಬೇಕು ಎಂದು ಹೇಳಿದರು. ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಅವಕಾಶ ನೀಡಿಲ್ಲ ಎಂಬ ಬಿಜೆಪಿ ಆರೋಪದ ಬಗ್ಗೆ ಮಾತನಾಡಿದ ಅವರು, ಬಿಜೆಪಿ ನಾಯಕರು ತಮ್ಮ ಪಕ್ಷದಲ್ಲೇ ಮಹಿಳೆಯರಿಗೆ ಹೆಚ್ಚಿನ ಅವಕಾಶ ನೀಡಲಿ.ವಿಜಯೇಂದ್ರ ಮತ್ತು ಆರ್. ಅಶೋಕ್ ಮಹಿಳೆಯರಿಗೆ ನಾಯಕತ್ವದ ಸ್ಥಾನ ಕಲ್ಪಿಸಲಿ. ಆರೆಸ್ಸೆಸ್ ಕೂಡ ಮಹಿಳೆಯರನ್ನು ಸಹ-ಸಂಚಾಲಕರನ್ನಾಗಿ ಮಾಡಲಿ. ನಂತರ ಅವರು ನಮ್ಮ ಬಗ್ಗೆ ಮಾತನಾಡಲಿ ಎಂದರು.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ರಸ್ತೆಯ ಮೇಲೆ ಚರಂಡಿ ನೀರು ಹರಿಯದಂತೆ ಕ್ರಮವಹಿಸಲು ಮ್ಯಾಗಳಮನಿ ಒತ್ತಾಯ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ತಾಲೂಕಿನ ಹೊಸಕೇರಾ ಗ್ರಾಮದಲ್ಲಿರುವ ಮುಖ್ಯರಸ್ತೆಯ ಮೇಲೆ ಚರಂಡಿ ನೀರು ಹರಿಯುತ್ತಿದೆ ಇದರಿಂದ ಸಾರ್ವಜನಿಕ-ರಿಗೆ ತೊಂದರೆಯಾಗುತ್ತಿದೆ. ಕೂಡಲೇ ಕ್ರಮವಹಿಸಬೇಕು ಎಂದು ಸರ್ವಾಂಗೀಣ ಅಭಿವೃದ್ಧಿ ಹೋರಾಟ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಮ್ಯಾಗಳಮನಿ ಗ್ರಾಮ ಪಂಚಾಯತ್ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.**



ಅವರು ಗುರುವಾರ ರಂದು ತಾಲೂಕ ಅಧ್ಯಕ್ಷ ಜಡಿಯಪ್ಪ ಹಂಚಿನಾಳ ಹಾಗೂ ಹೊಸಕೇರಾ ಗ್ರಾಮದ ಹಿರಿಯರು ಯುವಕರೊಂದಿಗೆ ಗ್ರಾಮಪಂಚಾಯಿತಿಗೆ ತೆರಳಿ ಕಾರ್ಯದರ್ಶಿ ವಿರುಪಯ್ಯ ಸ್ವಾಮಿಯೊಂದಿಗೆ ಮಾತನಾಡಿ, ಮಲ, ಮೂತ್ರ, ಬಟ್ಟೆ, ಪಾತ್ರೆ ತೊಳೆದ ಚರಂಡಿ ನೀರು ಬಸವೇಶ್ವರ ದೇವಸ್ಥಾನದಿಂದ ದುರ್ಗಮ್ಮ ದೇವಸ್ಥಾನದ ವರೆಗೆ ಸುಮಾರು 200 ಮೀಟರ್ ಉದ್ದ ಮುಖ್ಯ ರಸ್ತೆಯ ಮೇಲೆ ಹತ್ತು ವರ್ಷಗಳಿಂದ ಹರಿಯುತ್ತಿದೆ. ಗ್ರಾಮದ ಜನರು ಮಡಿಯಿಂದ ದೇವಸ್ಥಾನಗಳಿಗೆ ಹೋಗಬೇಕಾದರೂ ಮತ್ತು ಸುತ್ತಲಿನ ಜನರು ಕೂಡ ಇದೆ ಗಲೀಜು ನೀರಿನ ಮೇಲೆಯೇ ಹೋಗಬೇಕಾಗಿದೆ.

ಇದರಿಂದ ಎಲ್ಲರಿಗೂ ತೊಂದರೆಯಾಗುತ್ತಿದೆ. ಸರ್ಕಾರದಲ್ಲಿ ಪ್ರಭಾವ ಹೊಂದಿರುವ ಸಚಿವರ ಸ್ವ ಕ್ಷೇತ್ರದಲ್ಲಿಯೇ ಇಂತಹ ಸಮಸ್ಯೆ ಇರುವದು ತಲೆತಾಗ್ಗಿಸುವ ವಿಚಾರವಾಗಿದೆ ಕೂಡಲೇ ಸಮಸ್ಯೆ ಬಗೆ ಹರಿಸಬೇಕು. ತಿಂಗಳು ಸಮಯ ನೀಡುತ್ತಿದ್ದೇವೆ ಯಾವ ಕ್ರಮ ಕೈಗೊಂಡಿದ್ದೀರಿ ಎಂಬುದರ ಮಾಹಿತಿಯನ್ನು ಸಂಘಕ್ಕೆ ಹಾಗೂ ಗ್ರಾಮದವರ ಗಮನಕ್ಕೆ ತರಬೇಕೆಂದು ಮ್ಯಾಗಳಮನಿ ಒತ್ತಾಯಿಸಿದರು. ಈ ಸಂದರ್ಭದಲ್ಲಿ ವಿಜಯಕುಮಾರ್ ಕಲ್ಮನಿ, ಪಂಪನಗೌಡ, ಲಕ್ಷ್ಮಿಕಾಂತ್, ಬಸವರಾಜ, ಶಿವಲಿಂಗಪ್ಪ, ವಿನಾಯಕ, ಪ್ರಸನ್ನ, ಬಸವರಾಜ, ರವಿಕುಮಾರ್, ಆಂಜನೇಯ, ಕೃಷ್ಣಪ್ಪ, ಹನುಮನಗೌಡ, ಮತ್ತಿತರರು ಇದ್ದರು.

# ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಸಸಿ ವಿತರಣೆ,,



ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಬಿ.ಸಿ. ಟ್ರಸ್ಟ್) ಕೊಪ್ಪಳ ಯೋಜನಾ ಕಚೇರಿ ವತಿಯಿಂದ ಪರಿಸರ ಸಂರಕ್ಷಣೆ ಮತ್ತು ಹಸಿರು ಪರಿಸರ ನಿರ್ಮಾಣದ ಸಂದೇಶ ಸಾರುವ ಉದ್ದೇಶದಿಂದ ಸಸಿ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**

ಕೊಪ್ಪಳದಲ್ಲಿರುವ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಕಚೇರಿ ವ್ಯಾಪ್ತಿಯಲ್ಲಿ ನಡೆದ ಕಾರ್ಯಕ್ರಮಕ್ಕೆ ಕಲ್ಯಾಣ ಕರ್ನಾಟಕ ಪ್ರಾದೇಶಿಕ ನಿರ್ದೇಶಕರಾದ ಚಂದ್ರಶೇಖರ ಜೆ. ಅವರು ಸಾಂಕೇತಿಕವಾಗಿ ಸಸಿಗಳನ್ನು ವಿತರಿಸುವ ಮೂಲಕ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಇಂದಿನ ಅಗತ್ಯವಾಗಿದ್ದು, ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಕನಿಷ್ಠ ಒಂದು ಸಸಿಯಾದರೂ ನೆಟ್ಟು ಅದನ್ನು ಮರವಾಗಿ ಬೆಳೆಸುವ ಸಂಕಲ್ಪ ಮಾಡಬೇಕು ಎಂದು ಕರೆ ನೀಡಿದರು.

ಹವಾಮಾನ ವೈಪರೀತ್ಯ, ಅರಣ್ಯ ನಾಶ, ಜಾಗತಿಕ ತಾಪಮಾನ ಏರಿಕೆ ಮೊದಲಾದ ಸಮಸ್ಯೆಗಳು ಮಾನವ ಬದುಕಿಗೆ ಸವಾಲಾಗಿದ್ದು, ಇವುಗಳನ್ನು ನಿಯಂತ್ರಿಸಲು ಹೆಚ್ಚಿನ ಪ್ರಮಾಣದಲ್ಲಿ ಗಿಡಮರಗಳನ್ನು ಬೆಳೆಸುವುದು ಅತ್ಯವಶ್ಯಕವಾಗಿದೆ ಎಂದು ಅವರು ತಿಳಿಸಿದರು. ಪರಿಸರ ಉಳಿದರೆ ಮಾತ್ರ ಮಾನವಕುಲದ ಭವಿಷ್ಯ ಸುರಕ್ಷಿತವಾಗಿರಲಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜಿಲ್ಲಾ ನಿರ್ದೇಶಕರಾದ ವಿಠ್ಠಲ ಪೂಜಾರಿ ಎಂ. ಅವರು ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಗ್ರಾಮೀಣಾಭಿವೃದ್ಧಿಯ ಜೊತೆಗೆ ಪರಿಸರ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿದೆ.

ಪರಿಸರ ದಿನಾಚರಣೆ ಕೇವಲ ಒಂದು ದಿನಕ್ಕೆ ಸೀಮಿತವಾಗದೆ, ವರ್ಷಪೂರ್ತಿ ಪರಿಸರ ಕಾಳಜಿ ಬೆಳೆಸುವ ಕಾರ್ಯಗಳು ನಡೆಯಬೇಕು ಎಂದು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಎಂ.ಐ.ಎಸ್. ಯೋಜನಾಧಿಕಾರಿ ನದಾಫ್, ಜ್ಞಾನ ವಿಕಾಸ ಯೋಜನಾಧಿಕಾರಿ ಸುಧಾ, ಹಾಗೂ ಕಚೇ-ರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಪರಿಸರ ಸಂರಕ್ಷಣೆಗೆ ನರೇಗಾ ಯೋಜನೆ ಸಹಕಾರಿ ಪರಶುರಾಮ್ ನಾಯಕ

ಅ.ಶ. ಸುದ್ದಿ ಕುಕನೂರು

**ಕುಕನೂರು: ತಾಲೂಕಿನ ಕುದರಿಮೋತಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಭೈರನಾಯಕನಹಳ್ಳಿ ಗ್ರಾಮದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕಾಮಗಾರಿ ಸ್ಥಳದಲ್ಲಿ ರೋಜಗಾರ ದಿನ ಆಚರಿಸಲಾಯಿತು.**

ಕಾಮಗಾರಿ ಸ್ಥಳದಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿ ಪರಶುರಾಮ್ ನಾಯಕ್ ಸರ್ ಮಾತನಾಡಿ ನರೇಗಾ ಯೋಜನೆಯು ಗ್ರಾಮೀಣ ಪ್ರದೇಶದ ಕೂಲಿಕಾರರಿಗೆ ಒಂದು ವರ ವಿದ್ದಂತೆ ಕೂಲಿಯ ಜೊತೆಗೆ ಗ್ರಾಮಗಳಲ್ಲಿ ನೈಸರ್ಗಿಕ ಸಂಪನ್ಮೂಲ ಅಭಿವೃದ್ಧಿ ಪಡಿಸುವ ಕಾಮ-ರಿಗಳನ್ನು ಮಾಡುವ ಮೂಲಕ ನೆಲ ಜಲ ಸಂರಕ್ಷಣೆ ಮಾಡಬಹುದು ಅಂದರು ಕೂಲಿಕಾರರು ಕಾಮಾರಿ ಸ್ಥಳದಲ್ಲಿ ಹಾಜರಾತಿ ಯಶಸ್ವಿಯಾಗಲು ಇಕೆವೈಸಿ ಅವಶ್ಯ ಅದಕ್ಕಾಗಿ ಎಲ್ಲರೂ ಇಕೆವೈಸಿ ಮಾಡಬೇಕು,



ಅಳತೆ ಪ್ರಕಾರ ಕೆಲಸ ನಿರ್ವಹಿಸಬೇಕು ಎಂದರು.

ನಂತರ ತಾಲೂಕ ಐ.ಇ.ಸಿ ಸಂಯೋಜ-ಕ ಲಕ್ಷ್ಮಣ ಕೆರಳ್ಳಿ ಮಾತನಾಡಿ ಕೂಲಿಕಾರರು ತಮ್ಮ ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು ಬಿಸಿಲು ಬಹಳಷ್ಟು ಇರುವುದರಿಂದ ಬೆಳಗ್ಗೆ ಬೇಗನೇ ಕೆಲಸಕ್ಕೆ ಬರಬೇಕು, ತಲೆಗೆ ಟೋಪಿ ಅಥವಾ ವಸ್ತ್ರಗಳನ್ನು ಹಾಕಿರಬೇಕು, ಕೂಲಿಕಾರರು ತಮ್ಮ ಕುಟುಂಬದ ಸುರಕ್ಷತೆಗಾಗಿ ತಾವು ಪ್ರತಿಯೊಬ್ಬರು ಕಓಖಃಜ, ಕಓಎಎಃಜ ಜೀವ ವಿಮೆ ಮಾಡಿಸಿಕೊಳ್ಳಬೇಕು, ಅವಶ್ಯಕತೆ ಇರುವವರು ಅಟಲ್ ಪೆನ್ಸನ್, ಕಓ-ಖಜಒಆಜ ಪ್ರಧಾನಮಂತ್ರಿ ಶ್ರಮ ಯೋಗಿ ಮಾನ್ ಧನ್ ಯೋಜನೆ ಪೆನ್ಸನ್ ಸ್ಕೀಮ್ ಗಳಲ್ಲಿ ನೊಂದಣಿ ಮಾಡಿಕೊಳ್ಳಬೇಕು ಎಂದರು.


ಕೂಲಿಕಾರರು ಕನಿಷ್ಠ ಅಳತೆಯ ಕೆಲಸ ನಿರ್ವಹಿಸಿದರೆ ರೂ. 370 ಸಿಗಲಿದ್ದು ನರೇಗಾ ಯೋಜನೆಯಡಿ ಕೂಲಿಕಾರರು ಕೆಲಸ ಮಾಡಬೇಕು, ಕೂಲಿ ಹಣ ನೇರವಾಗಿ PFMS ಮೂಲಕ ಅವರ ಖಾತೆಗೆ ಜಮೆ ಆಗುವುದರಿಂದ ಕೂಲಿಕಾರರು ತಮ್ಮ ಖಾತೆಯನ್ನು ಸಕ್ರೀಯ ವಾಗಿ ಇಡುವುದು ಓಕಅಖ ಲಿಂಕ್ ಮಾಡಬೇಕು, E-KYC ಮಾಡಿರಬೇಕು ಎಂದರು. ಸ್ಥಳದಲ್ಲಿ ಗ್ರಾಮ ಕಾಯಯ ಮಿತ್ರರಾದ ಲಕ್ಷ್ಮವ್ವ ಮೂಲಿಮನಿ, ಕಾಯಕ ಬಂಧುಗಳು, ಭೈರನಾಯಕನಹಳ್ಳಿ ಗ್ರಾಮದ ಕೂಲಿಕಾರರು ಹಾಜರಿದ್ದರು.

# ಡಿ.ಕೆ ಶಿವಕುಮಾರ್ ಗೆ ಒಲಿದ ಮುಖ್ಯಮಂತ್ರಿ ಪದವಿ :ಅಭಿಮಾನಿಗಳ ಅಭಿಮಾನದ ಪರಿ ಹೇಗಿದೆ ನೋಡಿ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ನಿನ್ನೆ ಬುಧವಾರ ಲೋಕಭವನದಲ್ಲಿ ಸಚಿವ ಸಂಪುಟ ಸದಸ್ಯರೊಂದಿಗೆ ಪ್ರಮಾಣವಚನ ಸ್ವೀಕರಿಸಿದ್ದು ಅವರ ಅಭಿಮಾನಿಗಳಿಗೆ ದೀರ್ಘಕಾಲದಿಂದ ಕಂಡ ಕನಸು ನನಸಾದಂತಾಗಿತ್ತು.**

ಬೆಂಗಳೂರಿನ ರಾಜಭವನದಲ್ಲಿ ನಡೆದ ಸಮಾರಂಭದ ಸ್ಥಳ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳಲು 2,000ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿ-ತ್ತು. ಬೆಂಗಳೂರು ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ಸ್ವತಃ ಭದ್ರತಾ ವ್ಯವಸ್ಥೆಯ ಮೇಲ್ವಿಚಾರಣೆ ನಡೆಸಿ, ಅವರಿಗೆ ಮೂವರು ಜಂಟಿ ಪೊಲೀಸ್ ಆಯುಕ್ತರು ಹಾಗೂ 20 ಉಪ ಪೊಲೀಸ್ ಆಯುಕ್ತರು (ಡಿಸಿಪಿಗಳು) ಸಹಕಾರ ನೀಡಿದ್ದರು. ಇದೇ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಡಿ ಕೆ ಶಿವಕುಮಾರ್ ಬೆಂಬಲಿಗರ ಸಂಭ್ರಮಾಚರಣೆಯಿಂದ ಬೆಂಗಳೂರಿನ ಹಲವು





ಭಾಗಗಳಲ್ಲಿ ಹಬ್ಬದ ವಾತಾವರಣಕ್ಕೆ ಸಾಕ್ಷಿಯಾದವು.

ನೂತನ ಮುಖ್ಯಮಂತ್ರಿಗೆ ಅಭಿನಂದನೆ ಸಲ್ಲಿಸುವ ಬೃಹತ್ ಬ್ಯಾನರ್‌ಗಳು, ಫ್ಲೆಕ್ಸ್‌ಗಳು ಹಾಗೂ ಕಟೌಟ್‌ಗಳು ನಗರದಾದ್ಯಂತ ಕಣ್ಣಿಗೆ ರಾಚುತ್ತಿದ್ದವು. ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸುಮನಹಳ್ಳಿಯಲ್ಲಿ ಪಕ್ಷದ ಕಾರ್ಯಕರ್ತರು 100 ಅಡಿ ಎತ್ತರದ ಡಿ.ಕೆ. ಶಿವಕುಮಾರ್ ಅವರ ಬೃಹತ್ ಕಟೌಟ್ ನ್ನು ಸ್ಥಾಪಿಸಿ ಸಂಭ್ರಮಿಸಿದ್ದಾರೆ.

ಡಿ.ಕೆ. ಶಿವಕುಮಾರ್ ಅವರ ಕಟ್ಟಾ ಅಭಿಮಾನಿಯಿಂದ ವಿಶಿಷ್ಟ ಅಭಿಮಾನ ಪ್ರದರ್ಶನ: ಕುಣಿಗಲ್ ವಿಧಾನಸಭಾ ಕ್ಷೇತ್ರದ ಹನುಮಾಪುರ ಗ್ರಾಮದ ನಿವಾಸಿ ಹಾಗೂ ಡಿ.ಕೆ. ಶಿವಕುಮಾರ್ ಅವರ ಕಟ್ಟಾ ಅಭಿಮಾನಿಯಾಗಿರುವ ಗಿರಿ ಗೌಡ ಅವರು ತಮ್ಮ ನಾಯಕನ ಮೇಲಿನ ಅಭಿಮಾನವನ್ನು ವಿಶಿಷ್ಟ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ.

ಡಿ.ಕೆ. ಶಿವಕುಮಾರ್ ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ದಿನಾಂಕ ಮತ್ತು ಸಮಯವನ್ನು ತಮ್ಮ ಎರಡೂ ಕೈಗಳ ಮೇಲೆ ಟ್ಯಾಟೂ (ಹಚ್ಚೆ) ರೂಪದಲ್ಲಿ ಹಾಕಿಸಿಕೊಂಡಿದ್ದಾರೆ. ತಮ್ಮ ಬಹುಕಾಲದ ಕನಸು ನನಸಾಗುತ್ತಿರುವ ಸಂತಸದಲ್ಲಿ ಗಿರಿ ಗೌಡ ಶಿವಕುಮಾರ್ ಮುಖ್ಯಮಂತ್ರಿಯಾದ ಕ್ಷಣವನ್ನು ಜೀವನಪೂರ್ತಿ ನೆನಪಿನಲ್ಲಿ ಉಳಿಸಿಕೊಳ್ಳುವ ಉದ್ದೇಶದಿಂದ ಈ ಹಚ್ಚೆ ಹಾಕಿಸಿಕೊಂಡಿರುವುದಾಗಿ ತಿಳಿಸಿದ್ದಾರೆ. ಅಭಿಮಾನಿಗಳ ಅಭಿಮಾನ: ಯಾದಗಿ-ರಿಯಿಂದ ಬಂದ ಡಿ ಕೆ ಶಿವಕುಮಾರ್ ಅಭಿಮಾನಿಯೊಬ್ಬರು ತಮ್ಮ ಕೈ ಮೇಲೆ ಡಿ.ಕೆ. ಶಿವಕುಮಾರ್ ಅವರ ಹೆಸರಿನ ಹಚ್ಚೆ (ಟ್ಯಾಟೂ) ಹಾಕಿಸಿಕೊಂಡು ಬೆಂಬಲ ವ್ಯಕ್ತಪಡಿಸಿದ್ದಾರೆ.

ರಮೇಶ್ ಎಂದು ಗುರುತಿಸಲ್ಪಟ್ಟಿರುವ ಈ ಅಭಿಮಾನಿ, ಡಿ ಕೆ ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆ ಎಂಬ ನಿರೀಕ್ಷೆಯಿಂದ ಮೂರು ತಿಂಗಳ ಹಿಂದೆಯೇ ಈ ಟ್ಯಾಟೂ ಹಾಕಿಸಿಕೊಂಡಿದ್ದೇನೆ ಎಂದು ಹೇಳಿದ್ದಾರೆ. ಅವರು ಮುಂದಿನ ಮುಖ್ಯಮಂತ್ರಿ ಆಗುತ್ತಾರೆ ಎಂಬ ಆಶಯ ನನ್ನಲ್ಲಿತ್ತು. ಆ ಕನಸು ಇಂದು ನನಸಾಗಿದೆ ಎಂದು ರಮೇಶ್ ಹೇಳಿದ್ದಾರೆ. ಜೊತೆಗೆ, ಪ್ರೀತಿಯು ಹೃದಯದಲ್ಲಿರಬೇಕು, ಟ್ಯಾಟೂಗಳ ಮೂಲಕ ಪ್ರದರ್ಶಿಸುವ ಅಗತ್ಯವಿಲ್ಲ ಎಂದು ಡಿ ಕೆ ಶಿವಕುಮಾರ್ ಅವರು ಸಲಹೆ ನೀಡಿದ್ದರು ಎಂದೂ ಅವರು ತಿಳಿಸಿದ್ದಾರೆ. ಡಿ ಕೆ ಶಿವಕುಮಾರ್ ಪ್ರಮಾಣವಚನ ಸಮಾರಂಭದಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕರು, ವಿವಿಧ ರಾಜಕೀಯ ಗಣ್ಯರು ಹಾಗೂ ಸಾವಿರಾರು ಬೆಂಬಲಿಗರು ಭಾಗವಹಿಸಿದ್ದು, ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದಲ್ಲಿ ನಡೆದ ಅತಿದೊಡ್ಡ ರಾಜಕೀಯ ಕಾರ್ಯಕ್ರಮಗಳಲ್ಲಿ ಒಂದಾಗಿದೆ.

# ಲೇಖಕರ ದಿನಚರಿ...

## ಪರಿಕೃತಿ ಮೌನದ ಕೃತಿ

ಕೀರ್ತಿ ಗುರುರಾಜ ಕುಲಕರ್ಣಿವರ ಕವನ ಸಂಕಲನ "ಪರಿಕೃತಿ" 71 ಕವಿತೆಗಳನ್ನು ಒಳಗೊಂಡಿದೆ. ಸಾಕಷ್ಟು ಕವಿತೆಗಳು ಪ್ರಕೃತಿ, ಮೌನ, ನಗು, ಕೃಷ್ಣ, ದೇವರು, ತಂದೆ,ತಾಯಿ, ತಾಳ್ಮೆ, ಪ್ರೀತಿ ಹೀಗೆ ಹತ್ತು ಹಲವು ವಿಚಾರಗಳನ್ನು ಸೂಚ್ಯವಾಗಿ ಕವನಗಳಲ್ಲಿ ಚಿತ್ರಿಸಿದ್ದಾರೆ.

'ಸೃಷ್ಟಿಸೆಲೆ' ಎಂಬ ಕವನದಲ್ಲಿ

"ಕೆಳಗೆ ಸಾರ್ಥಕ ತುಂಬಿ ನಲಿವ
ಇಳೆ, ಗೋವುಗಳ ಸಾಲು
ಉಕ್ಕುತ್ತಿರುವ ಹೊಸತನ
ಪ್ರಕೃತಿ ಭಾವತುಂಬಿ ಆನಂದದ
ಭೂ ಸ್ವರ್ಗ"

ಎಂದು ಕವಿಗೆ ಭೂಮಿಯೇ ಸ್ವರ್ಗವಾಗಿ ಕಾಣುತ್ತಿದೆ. ನೋಡುವಂತ ದೃಷ್ಟಿಕೋನದ ಮೇಲೆ ಅವರವರ ಭಾವ. ಹಸಿರು ಭೂಮಿ, ಗೋವುಗಳ ಸಾಲು ಮುಂತಾದವುಗಳ ಬಗ್ಗೆ ವರ್ಣಿಸಿದ್ದಾರೆ.

"ತಾಳ್ಮೆಯತಂತ್ರ" ಎಂಬ ಕವನದಲ್ಲಿ

"ಪ್ರಶ್ನೆ ಕೇಳುವ ಹುಚ್ಚಿಗೆ
ಒಂದೇ ಉತ್ತರ, ಕೊಟ್ಟಾಗ
ಸಿಕ್ಕ ಬೆಲೆಗೆ, ತತ್ತರವಾದ
ಕ್ಷಣ ಮೌನ
ಸಮಯಕ್ಕೆ ಎಲ್ಲ ಗೊತ್ತು, ಅದಕ್ಕೆ
ತಾಳ್ಮೆಯು ಗೊತ್ತು
ತಂತ್ರವು ಗೊತ್ತು"

ಕವಯತ್ರಿ ಕವನಗಳಲ್ಲಿ ಮೌನ ಹೆಚ್ಚಾಗಿ ಆವರಿಸಿಕೊಂಡದನ್ನು ಅನೇಕ ಕವಿತೆಗಳಲ್ಲಿ ಕಾಣುತ್ತೇವೆ. ಮೇಲಿನ ಸಾಲುಗಳಲ್ಲಿಯೂ ಸಮಯ, ತಾಳ್ಮೆ ಮತ್ತು ಮೌನಗಳ ಮಹತ್ವವನ್ನು ಹೇಳಿದ್ದಾರೆ.


'ನನ್ನ ಕೃಷ್ಣ' ಕವಿತೆಯಲ್ಲಿ

"ಮೆಲ್ಲಗೆ ನೋವು ಮರೆಸಿ
ನಗು ತರಿಸಿ ನಾನು ನನ್ನೊಳಗೆ
ಆಳಕ್ಕೆ ಮೌನದಾಳಕ್ಕಿಳಿದಾಗ
ಸದ್ದಿಲ್ಲದೇ ಸರಿದು ಹೋಗುವ
ನನ್ನ ಕೃಷ್ಣ"

ಮೌನ ಮತ್ತು ಕೃಷ್ಣರ ಬಗ್ಗೆ ಈ ಕವನದಲ್ಲಿ ನೋಡಬಹುದು.

"ಅದೊಂದೆ ಸತ್ಯ ನಂಬಿಕೆ
ನಂಬಿದರೆ ಅದು ಸ್ವರ್ಗ
ನಂಬದಿದ್ದರೆ ಅದೇ ನರಕ
ಬ್ರಹ್ಮಾಂಡಕ್ಕೆ ಒಂದೇ ನಂಬಿಕೆ"

ಈ ಸಾಲುಗಳು "ಬ್ರಹ್ಮಾಂಡ ಬಂಧನ" ಎಂಬ ಕವನದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಜಗತ್ತು ನಿಂತಿರುವುದೇ ನಂಬಿಕೆಯ ಮೇಲೆ, ನಂಬಿದರೆ ಸ್ವರ್ಗ, ನಂಬದಿದ್ದರೆ ನರಕ ಎಂಬ ನೀತಿ ಪಾಠವನ್ನು ಸರಳವಾಗಿ ಹೇಳಿದ್ದಾರೆ.






'ಪರಿಪರಿಮಳ' ಎಂಬ ಕವಿತೆಯಲ್ಲಿ

"ಹೊಸ ಭಾಷೆಗೆ
ಭಾವ ಕೊಡಲು
ಬಂದ ಸುಂದರ
ಮೊಗದ ಸುಂದರಿ
ಕವಿತೆ"

ಕವಿತೆಯೆಂದರೆ ಹಾಗೆಯೇ ಅಲ್ಲವೇ ಅಲ್ಲಿ ಭಾವ, ವರ್ಣನೆ ಇರಬೇಕು. ಸುಂದರವಾಗಿ ಪದಗಳನ್ನು ಕಟ್ಟಿದರೆ ಸಹೃದಯನು ಸವಿಯುವನು ಎಂದು ಹೇಳಿದ್ದಾರೆ.

ಎಲ್ಲಾ ಕವಿತೆಗಳನ್ನು ಓದಿದಾಗ ಕವಿತೆ ಕಟ್ಟುವ ಕಲೆ ಇವರಿಗೆ ಸಿದ್ಧಿಸಿದೆ ಎಂದು ಹೇಳಬಹುದು. ಕೀರ್ತಿಯವರು ಇನ್ನಷ್ಟು ಕವನಗಳನ್ನು ಬರೆಯಲಿ ಎಂದು ಆಶಿಸುತ್ತೇನೆ.



ಬಸವರಾಜ ಹೊನಗೌಡರ
ಚಿಕ್ಕೋಡಿ ಜಿ.ಬೆಳಗಾವಿ.

## ಮುಕ್ತ

ಮುಂಜಾನೆ ಎದ್ದು ರೇಡಿಯೋ ಸ್ವಿಚ್ ತಿರುವಿದಾಗ ಬೆಳಗಿನ ವಂದನ ಕಾರ್ಯಕ್ರಮದಲ್ಲಿ ಭಕ್ತಿಗೀತೆ "ಯಾರಿಗೆ ಯಾರುಂಟು ಎರವಿನ ಸಂಸಾರ ನೀರ ಮೇಲನ ಗುಳ್ಳೆ ನಿಜವಲ್ಲ ಹರಿಯೇ"... ಎಂಬ ಹಾಡು ಕೇಳಿ ಬದುಕು ನೀರಸ ಎನಿಸಿದರೂ..ಕಿಟಕಿ ಬಾಗಿಲು ತೆರೆವಾಗ... ಕತ್ತಲನ್ನ ಸೀಳಿ ಹೊಂಗಿರಣಗಳು ತೂರಿ ಬಂದಾಗ ತನ್ನ ಬದುಕಿನ ಹಳೆಯ ನೆನಪುಗಳು ಮನಃಪಟಲದಲ್ಲಿ ಹಾದು ಹೋದವು.

ಆರು ಜನ ಅಕ್ಕಂದಿರ ಜೊತೆ ಏಳನೆಯವಳಾಗಿ ಸಂಪ್ರದಾಯಸ್ಥ ವೈದಿಕ ಮನೆತನದಲ್ಲಿ ಹುಟ್ಟಿ, ಹೈ ಸ್ಕೂಲ್ ನಂತರದ ವಿದ್ಯೆಗೆ ಹೋರಾಟ ಮಾಡಿ ಪದವಿ ಮುಗಿಸಿದ್ದಳು ಶರಧಿ , ಕೆಲಸಕ್ಕೆ ಕಳಿಸಲು ಒಪ್ಪದ ಸಂಪ್ರದಾಯಸ್ಥರು ಪೌರೋಹಿತ್ಯ ಮನೆತನದ ಹುಡುಗನನ್ನೇ ನೋಡಿ ಒತ್ತಾಯಿಸಿ ಮದುವೆ ಮಾಡಿದರು. ನಾಲ್ಕು ಗೋಡೆಗಳ ಮಧ್ಯೆ ....ಬಂದು ಹೋಗುವ ಅತಿಥಿಗಳ ಸೇವೆ ಮಾಡುತ್ತಲೇ ಎರಡು ವರ್ಷದ ಪುಟ್ಟ ಮಗುವಿನೊಂದಿಗೆ ಹಾಗೊ ...ಹೀಗೋ...ಬದುಕು ಸಾಗುತ್ತಿರುವಾಗಲೇ...

ಮಳೆಗಾಲದಲ್ಲಿ ಬಂದ ಒಂದು ಸಣ್ಣ ಜ್ವರವೇ ...ಗಂಡನ ಜೀವವನ್ನೇ ಬಲಿತೆಗೆದುಕೊಂಡಾಗ ಸಂಪ್ರದಾಯದಂತೆ ಕಾಲುಂಗುರ, ತಾಳಿ, ಬಳೆ ತೆಗೆದು ಗಂಡನ ಕಾಲ ಬಳಿ ಇರಿಸುವಂತೆ ಹೇಳಿದಾಗ, ಗಟ್ಟಿ ಮನಸ್ಸು ಮಾಡಿ ಗಂಡ ಕೊಟ್ಟಿದ್ದು ತಾಳಿ ಮತ್ತು ಕಾಲುಂಗುರ, ಮಾತ್ರ .... ಬಳೆ, ಹೂವು,ಅರಿಷಿಣ, ಕುಂಕುಮ ಇವೆಲ್ಲವೂ ಹೆಣ್ಣಿಗೆ ಹುಟ್ಟಿನಿಂದಲೇ ಬಂದದ್ದು ಆದರೂ ಈಗ ತಾಳಿ ಮತ್ತು ಕಾಲುಂಗರವನ್ನು ನಾನು ತೆಗೆಯಲಾರೆ.

ಏಕೆಂದರೆ ಗಂಡಿನ ಆಸರೆ ಇಲ್ಲದ ವಿಧವೆ ಎಂದು ಸಮಾಜಕ್ಕೆ ಸಾರಲಾರೆ....ಸಮಾಜದ ಅನುಕಂಪ,ಹಿಂಸೆಯ ಮಾತು, ಕಾಮುಕರ ಕಣ್ಣಿಗೆ ಪರದೆ ಎಳೆದು ಈ ನನ್ನ ಪುಟ್ಟ ಮಗುವಿನ ಭವಿಷ್ಯವನ್ನು ರೂಪಿಸುವ ಹೊಣೆ ನನ್ನ ಮೇಲಿದೆ ಎಂದು ದಿಟ್ಟತನದಿಂದ ಎಲ್ಲರನ್ನು ಎದುರಿಸಿ ಗಂಡನ ಕಾರ್ಯವನ್ನು ಮುಗಿಸಿ ತವರು ಮನೆಯನ್ನ ಸೇರಿ, ತಾನು ಕಲಿತ ಶಾಲೆಯಲ್ಲಿ ಶಿಕ್ಷಕಿಯಾಗಿ....


ತನ್ನ ಮಗುವಿನ ಭವಿಷ್ಯದ ಜೊತೆಗೆ ಹಲವಾರು ಮಕ್ಕಳಿಗೆ ಗುರುವಾಗಿ ಗುರಿ ತೋರೊ ಕಾಯಕವನ್ನಾರಂಭಿಸಿ... ಕಲಿತ ವಿದ್ಯೆಯೇ ತನಗೆ ಸ್ವಾಭಿಮಾನದ ಬದುಕನ್ನು ಕಟ್ಟಿಕೊಟ್ಟಿದೆ. ಮೌಢ್ಯ ಸಂಪ್ರದಾಯಗಳನ್ನು ಎದುರಿಸುವ ಶಕ್ತಿ ಕೊಟ್ಟಿದೆ. ಹೋರಾಟದಿಂದ ಪಡೆದ ವಿದ್ಯೆಯೇ ಹೋರಾಟದ ಬದುಕಿಗೆ ಜಯ ತಂದು ಕೊಟ್ಟಿದೆ ಎಂದುಕೊಳ್ಳುತ್ತಿರುವಾಗಲೇ...ಗಡಿಯಾರ 'ಏಳು ಗಂಟೆ 'ಎಂದು ರಿಂಗಣಿಸಿ ಎಚ್ಚರಿಸುತ್ತಾ ನೆನಪಿನ ಲೋಕದಿಂದ ಹೊರ 'ಗೆಳೆದಿತ್ತು.,ಗಡಿಬಿಡಿಯಲ್ಲೆದ್ದು ಮಲಗಿದ್ದ ಪುಟ್ಟ ಕಂದಮ್ಮನಿಗೆ ಹೂ ಮುತ್ತನಿಕ್ಕಿ ಬೆಳಗಿನ ಕೆಲಸದಲ್ಲಿ ತಲ್ಲೀನಳಾದಳು





ಜ್ಞಾನೇಶ್ವರಿ ಉಡುಪ

## ಸಾಹಿತಿ ಎಂಬ ಸಾಹಸಿ



ನಾನು ಬರೆಯುತ್ತೇನೆ
ಕವಿತೆ ಕಥೆ ಕಾದಂಬರಿ
ಕಂದ-ಚಂದ, ಷಟ್ಪದಿಗಳನ್ನ?..

ಕಾಡುವ ವಿಷಯಗಳನ್ನ
ಕನವರಿಸುತ್ತೇನೆ
ಕಂಡುಕೊಳ್ಳುತ್ತಾನೆ
ಕಾಗದ ಮೇಲೆ ಇಳಿಸುತ್ತೇನೆ?..

ಸಮಯ ಸಾಧನ
ಸವಲತ್ತುಗಳಿಲ್ಲದೆಯೂ ನಾನು
ಬರೆಯುತ್ತೇನೆ
ಪರರ ಮೆಚ್ಚಿಸಲಲ್ಲ
ಓದಿದವರ ಮನ ಮುಟ್ಟಲು ?..

ಗಮನದಲ್ಲಿಟ್ಟುಕೊಳ್ಳುತ್ತೇನೆ
ಸುಮ್ಮನೆ ಪುಸ್ತಕದ ಮುಖಪುಟ ನೋಡಿ
ಓದುವವರನ್ನು
ಕಡೆಗಣಿಸಿದೆ ಒಳ ಹೂರಣದ ಸವಿ
ಸವಿಯಬೇಕೆಂಬವರನ್ನು
ಗಮನದಲ್ಲಿಟ್ಟುಕೊಂಡು
ಬರೆಯುತ್ತೇನೆ?.

ಅಳೆದು ತೂಗಿ ಬರೆದು ಬಿಸಾಕಿ
ಮತ್ತೆ ಬರೆದು ರೂಪ ನೀಡಿ ಸಮಾಧಾನಿಸದೆ
ಸುಮ್ಮನಾಗುತ್ತೇನೆ
ಮತ್ತೊಂದು ಬಗೆಯ ಹಪಹಪಿಗೆ
ನನ್ನ ನಾ ತೆರೆದುಕೊಳ್ಳುತ್ತೇನೆ
ಕಾರಣ ನಾನು ಸಾಹಿತಿ ಎಂಬ ಸಾಹಸಿ.



ಸುರೇಶ ತಂಗೋಡ.
(ಗದಗ ಜಿಲ್ಲೆ)

## ಪ್ಲಾಸ್ಟಿಕ್ ಅಳಿಸಿ.., ಜೀವ(ನ) ಉಳಿಸಿ..!



**ಸಕಲ ಜಲ ಜೀವರಾಶಿಗಳಿಗೆ ಜೀವಿಸಲು ಗಾಳಿ, ನೀರು, ಬೆಳಕು ಸೇರಿದಂತೆ ಇತರೆ ಮುಂತಾದ ಸಂಪತ್ತುಗಳನ್ನು ಒದಗಿಸಿದೆ ಈ ಭೂಮಿ. ಆದರೆ, ಇತ್ತೀಚಿನ ದಿನಗಳಲ್ಲಿ ಜನರು ಪರಿಸರವನ್ನು ಒಂದಲ್ಲ ಒಂದು ರೀತಿಯಲ್ಲಿ ಹಾಳು ಮಾಡುತ್ತಾ ಬರುತ್ತಿದ್ದಾರೆ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಅತ್ತ ಇತ್ತ ಕಣ್ಣು ಹಾಯಿಸಿದರೆ ನಮ್ಮ ಕಣ್ಣಿಗೆ ಕಾಣುವುದು ಪ್ಲಾಸ್ಟಿಕ್ ಒಂದೇ.**

ಇಂತಹ ದೃಶ್ಯಗಳು ಹೆಚ್ಚಾಗಿ ಜನವಸತಿ ಇಲ್ಲದಂತಹ ನಿರ್ಜಲ ಪ್ರದೇಶದಲ್ಲಿ ಕಂಡು ಬರುತ್ತಿದೆ. ನಾವು ಬಸ್ಸು ಅಲ್ಲಿ ತೆರಳುವ ಸಂದರ್ಭದಲ್ಲಿ ತಿಂದ ತಿಂಡಿಂಉ ಅಥವಾ ಕುಡಿದಂತಹ ರಸಭರಿತ ಜ್ಯೂಸ್ ಬಾಟಲಿ ಅಥವಾ ನೀರಿನ ಬಾಟಲಿ ಖಾಲಿ ಆಯಿತೆಂದು ಅದನ್ನು ತಕ್ಷಣವೇ ಕಿಟಕಿಯಿಂದ ಹೊರ ಎಸೆಯುತ್ತೇವೆ. ಇಲ್ಲಿ ಜನರು ಹಸಿವಿನ ಬಗ್ಗೆ ಮಾತ್ರ ಯೋಚಿಸುತ್ತಾರೆ. ಹೊರತು ಪರಿಸರ ಸಂರಕ್ಷಣೆಯ ಬಗ್ಗೆ ಅಲ್ಲ ಇಂದಿನ ಪೀಳಿಗೆಯು ಇನ್ನು ಕೂಡ ಪರಿಸರದ ಬಗ್ಗೆ ಚಿಂತಿಸುತ್ತಿಲ್ಲ.

ಪ್ಲಾಸ್ಟಿಕ್ ನಿಂದ ಪರಿಸರ ಎದುರಿಸುತ್ತಿರುವ ಸಮಸ್ಯೆ ಪ್ಲಾಸ್ಟಿಕ್ ನಂತಹ ವಸ್ತುಗಳು ಮಣ್ಣಿನಲ್ಲಿ ಎಷ್ಟು ವರ್ಷವಾದರೂ ಕರಗುವುದಿಲ್ಲ ಇದರಿಂದ ಮಣ್ಣಿನ ಫಲವತ್ತತೆ ಕಡಿಮೆ ಆಗುತ್ತದೆ. ಜೈವಿಕವಾಗಿ ವಿಘಟನೆ ಯಾಗದ ಈ ವಸ್ತುಗಳು ನೂರಾರು ಕಾಲ ಪರಿಸರದಲ್ಲಿ ಉಳಿದು ಜೀವಸಂಕುಲಕ್ಕೆ ಕುತ್ತು ತಂದೊಡ್ಡುತ್ತಿವೆ. ಜಲಚರ ಮತ್ತು ಪ್ರಾಣಿಗಳ ಆರೋಗ್ಯದ ಮೇಲೆ ಬೀರುತ್ತಿರುವ ದುಷ್ಪರಿಣಾಮ ಪ್ಲಾಸ್ಟಿಕ್ ಮಾಲಿನ್ಯಕಾರಕ ವಸ್ತುಗಳನ್ನು ನದಿ ನೀರಿಗೆ ಎಸೆಯುದರಿಂದ ಜಲಮೂಲ ಕಲುಷಿತಗೊಳ್ಳುತ್ತದೆ. ಈ ರೀತಿಯ ಕೆಲಸ ಮಾಡುವುದರಿಂದ ಜಲಚರ ಜೀವಿಗಳಿಗೆ ಬದುಕಲು ಆಗುತ್ತಿಲ್ಲ. ಅವು ಹಸುವಿನಿಂದಾಗಿ ಅಲ್ಲಿರುವಂತಹ ಮಾಲಿನ್ಯಕಾರಕ ಕಸಗಳನ್ನು ತಿಂದು ಜೀವ ಕಳೆದುಕೊಳ್ಳುತ್ತಿವೆ. ಕೆಲವೊಮ್ಮೆ ಮೀನುಗಳನ್ನು ಹಿಡಿದು ತಿನ್ನುವ ಜನರಿಗೂ ಸಹ ಅಪಾಯ ಉಂಟಾಗುತ್ತದೆ. ಅಂತಹ ಮೀನುಗಳನ್ನು ತಿನ್ನುವುದರಿಂದ ದೇಹದೊಳಗೆ ರೋಗಗಳ ಲಕ್ಷಣ ಸೃಷ್ಟಿಯಾಗುತ್ತದೆ. ಇನ್ನು ಹೇಳುವುದಾದರೆ ತಿಂದು ಉಳಿದ ಆಹಾರವನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ಕಸದ ತೊಟ್ಟಿಗೆ ಎಸೆಯುತ್ತಾರೆ. ಅದನ್ನು ಧನ, ಕರುಗಳು, ಶ್ವಾನಗಳು ಸೇವಿಸುವುದರಿಂದ ಗಂಟಲಿನಲ್ಲಿ ಸಿಲುಕಿಕೊಂಡು ಜೀವಕ್ಕೆ ಆಪತ್ತು ಬರುತ್ತದೆ.


ಹೀಗೆ ಅದೆಷ್ಟು ಪ್ರಾಣಿಗಳು ಪ್ರಾಣಗಳನ್ನು ಕಳೆದುಕೊಂಡಿದೆ. ಪ್ಲಾಸ್ಟಿಕ್ ನಿಂದ ಆರೋಗ್ಯದಲ್ಲಿ ಆಗುತ್ತಿರುವು ತೊಂದರೆ ಹೋಟೆಲ್ ಗಳಿಂದ ತರುವಂತಹ ಬಿಸಿ ಬಿಸಿ ಆಹಾರವನ್ನು ಪ್ಲಾಸ್ಟಿಕ್ ಕವರ್ ನಲ್ಲಿ ತರುತ್ತೇವೆ ಅದರಿಂದ ಕ್ಯಾನ್ಸರ್ , ಥೈರಾಯ್ಡ್ ರೋಗಗಳು ಮತ್ತು ಚರ್ಮದ ಕಾಯಿಲೆ ಬರುವ ಸಾಧ್ಯತೆ ಹೆಚ್ಚಾಗಿದೆ. ಪ್ಲಾಸ್ಟಿಕ್ ದಹನದಿಂದ ಗಾಳಿಯಲ್ಲಿ ಆಗುವ ಆಡಚಣೆ ಪ್ಲಾಸ್ಟಿಕ್ ತ್ಯಾಜ್ಯವನ್ನು ಬೆಂಕಿಯಲ್ಲಿ ಉರಿಸುದರಿಂದ ವಿಷಕಾರಿ ಅನಿಲಗಳು ಹೊರಬರುತ್ತವೆ ಇವು ಗಾಳಿಯೊಂದಿಗೆ ಸೇರಿಕೊಂಡು ಉಸಿರಾಟದ ಸಮಸ್ಯೆಯನ್ನು ಸೃಷ್ಟಿಸುತ್ತದೆ. ಚರಂಡಿಗಳಿಂದ ಎದುರಿಸುತ್ತಿರುವ ಸಮಸ್ಯೆ ಪ್ಲಾಸ್ಟಿಕ್ ಚೀಲ, ಬಾಟಲಿ ಮುಂತಾದವುಗಳು ಚರಂಡಿಗಳಲ್ಲಿ ಸಿಲುಕಿ ನೀರು ಸರಾಗವಾಗಿ ಹರಿಯದಂತೆ ತಡೆದು ನಿಲ್ಲುತ್ತಿವೆ.

ಅವು ಮಳೆಗಾಲದಲ್ಲಿ ಪ್ರವಾಹ ಬಂದಾಗ ಸಾಂಕ್ರಾಮಿಕ ರೋಗಗಳು ಹರಡಲು ಕಾರಣವಾಗುತ್ತದೆ. ಇವುಗಳಿಂದ ಆಗುತ್ತಿರುವ ಸಮಸ್ಯೆಯನ್ನು ತಡೆಯಲು ನಾವು ಪರಿಹಾರ ಉಪಾಯಗಳನ್ನು ಕಂಡುಕೊಳ್ಳಬೇಕು. ಪ್ಲಾಸ್ಟಿಕ್ ಚೀಲವನ್ನು ಬಳಸುವಲ್ಲಿ ಬಟ್ಟೆಯ ಚೀಲವನ್ನು ಬಳಸಬೇಕು ಏಕೆಂದರೆ ಬಟ್ಟೆ ಚೀಲವನ್ನು ಮರುಬಳಕೆ ಮಾಡಬಹುದು ಇದರಿಂದ ಪರಿಸರಕ್ಕೆ ಯಾವುದೇ ರೀತಿಯ ಸಮಸ್ಯೆಗಳು ಉಂಟಾಗುವುದಿಲ್ಲ. ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು ನಮ್ಮೆಲ್ಲರ ಹೊಣೆ ಆದ್ದರಿಂದ ನಾವು ಸುತ್ತಮುತ್ತಲಿನ ಪರಿಸರವನ್ನು ಪ್ಲಾಸ್ಟಿಕ್ ಮುಕ್ತ ಪರಿಸರವನ್ನಾಗಿ ಮಾಡಬೇಕು.



ದೀಪಿಕಾ. ದೋಳ. ದ್ವಿತೀಯ
ಪತ್ರಿಕೋದ್ಯಮ ವಿದ್ಯಾರ್ಥಿ, ಪುತ್ತೂರು.

## ಬೆಂಗಳೂರಲ್ಲಿ ಎಸ್‌ಐಆರ್‌ಗೆ ಮುಹೂರ್ತ ನಿಗದಿ




ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ನಗರದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್)-2026 ಕಾರ್ಯಕ್ಕೆ ಭಾರತ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದೆ. ಅರ್ಹತಾ ದಿನಾಂಕವನ್ನು ಅ.1 ಎಂದು ನಿಗದಿಪಡಿಸಲಾಗಿದ್ದು, ಈ ಕುರಿತು ನಡೆದ ಮಾಧ್ಯಮಗೋಷ್ಠಿಯಲ್ಲಿ ಅಧಿಕಾರಿಗಳು ಮಾಹಿತಿ ನೀಡಲಾಯಿತು.**

ಚುನಾವಣೆ ಸುದ್ದಿ ನವೀಕರಣಗಳು ಪರಿಷ್ಕರಣೆ ಕಾರ್ಯದ ಅಂಗವಾಗಿ ಜೂ. 20ರಿಂದ 29ರ ವರೆಗೆ ಸಿದ್ಧತೆ, ತರಬೇತಿ ಹಾಗೂ ಮುದ್ರಣ ಕಾರ್ಯ ನಡೆಯಲಿದ್ದು, ಜೂ.30ರಿಂದ ಜುಲೈ 29ರ ವರೆಗೆ ಬೂತ್ ಮಟ್ಟದ ಅಧಿಕಾರಿಗಳು ಮನೆ-ಮನೆಗೆ ಭೇಟಿ ನೀಡಿ ಸಮೀಕ್ಷೆ ನಡೆಸಲಿದ್ದಾರೆ. ಜು.29ರಂದು ಮತಗಟ್ಟೆಗಳ ಮರುಹೊಂದಾಣಿಕೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಆ.5ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು. ಆ.5ರಿಂದ ಸೆ.4ರ ವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ. ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿ ಕಾರ್ಯ ಆ.5ರಿಂದ ಅ.3ರವರೆಗೆ ನಡೆಯಲಿದ್ದು, ಅಂತಿಮ ಮತದಾರರ ಪಟ್ಟಿಯನ್ನು ಅ.7ರಂದು ಪ್ರಕಟಿಸಲಾಗುವುದು.

ಇದೇ ವೇಳೆ, 2002ರ ಮತದಾರರ ಪಟ್ಟಿಗೆ 2025ರ ಮತದಾರರ ಪಟ್ಟಿಯನ್ನು ಮ್ಯಾಪಿಂಗ್ ಮಾಡುವ ಪೂರ್ವಭಾವಿ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಲಾಯಿತು. ಮುಖ್ಯ ಚುನಾವಣಾಧಿಕಾರಿಗಳ ನಿರ್ದೇಶನದಂತೆ ಜೂನ್ 16ರಂದು ಇ-ರೋಲ್ ಫ್ರೀಜ್ ಆಗಲಿರುವ ಹಿನ್ನೆಲೆಯಲ್ಲಿ, ಬಾಕಿ ಉಳಿದಿರುವ ನಮೂನೆ 6, 6ಎ, 7 ಹಾಗೂ 8ರ ನಮೂನೆ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಮನೆ-ಮನೆ ಸಮೀಕ್ಷೆ ಆರಂಭಕ್ಕೂ ಮುನ್ನ ಚುನಾವಣಾ ನೋಂದಣಿ ಅಧಿಕಾರಿಗಳು ಹಾಗೂ ಬೂತ್ ಲೆವಲ್ ಏಜೆಂಟ್‌ಗಳ ಜೊತೆ ಸಭೆ ನಡೆಸಿ, ಎಸ್‌ಐಆರ್ ವೇಳಾಪಟ್ಟಿ ಮತ್ತು ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಲಿದ್ದಾರೆ.

ರಾಜಕೀಯ ಪಕ್ಷಗಳು ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಕರಡು ಮತದಾರರ ಪಟ್ಟಿ ಪ್ರಕಟವಾಗುವವರೆಗೆ ಪ್ರತಿದಿನ 50 ಅರ್ಜಿ ಸಲ್ಲಿಸಲು ಅವಕಾಶವಿದ್ದು, ಕರಡು ಪಟ್ಟಿ ಪ್ರಕಟವಾದ ಬಳಿಕ ದಿನಕ್ಕೆ ಗರಿಷ್ಠ 10 ಅರ್ಜಿಗಳನ್ನು ಮಾತ್ರ ಸಲ್ಲಿಸಬಹುದಾಗಿದೆ. ಪ್ರತಿ ಮತಗಟ್ಟೆಗೆ ಒಬ್ಬರಂತೆ ಬೂತ್ ಲೆವಲ್ ಏಜೆಂಟ್‌ಗಳನ್ನು ನೇಮಕ ಮಾಡಿ ಅರ್ಹ ಮತದಾರರ ನೋಂದಣಿ ಕಾರ್ಯದಲ್ಲಿ ಸಹಕರಿಸುವಂತೆ ನೋಂದಾಯಿತ ಹಾಗೂ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಮನವಿ ಮಾಡಲಾಗಿದೆ.

# ಆರೋಗ್ಯ ಅಧಿಕಾರಿಗಳ ಕರ್ತವ್ಯ ಲೋಪದಿಂದ ಅನೈರ್ಮಲ್ಯೀಕರಣ. ಉತ್ತರಿಸದೆ ಚಡಪಡಿಸಿದ ಮುಖ್ಯಾಧಿಕಾರಿ. ಎಚ್ಚರಿಸಿದ ಕೆ ಆರ್ ಎಸ್ ಪಕ್ಷ

ಅ.ಶ. ಸುದ್ದಿ ಕಾರಟಗಿ

**ಕಾರಟಗಿ: ಪಟ್ಟಣದ ಪುರಸಭೆಯ ಮುಖ್ಯಾಧಿಕಾರಿ ಕಚೇರಿಯ ಆಡಳಿತದ ಬಗ್ಗೆ ಕೆ ಆರ್ ಎಸ್ ಪಕ್ಷ ಕೇಳಿರುವ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿದೆ ಅಧಿಕಾರದ ಅತಿ ಚಾಣಾಕ್ಷತನ ಬುದ್ಧಿಯನ್ನು ತೋರಿಸಿ ಆಡಳಿತದಲ್ಲಿ ಪಾರದರ್ಶಕತೆ ಇಲ್ಲ ಎನ್ನುವುದನ್ನು ತೋರಿಸಿದ ಘಟನೆ ನಡೆದಿದೆ,**

ಗುರುವಾರ ಕರ್ನಾಟಕ ರಾಷ್ಟ್ರೀಯ ಪಕ್ಷ ಕೊಪ್ಪಳ ಜಿಲ್ಲಾ ಘಟಕದ ಸೈನಿಕರು ರಾಜ್ಯಾದ್ಯಂತ ಹಮ್ಮಿಕೊಂಡಿರುವ ಲಂಚಮುಕ್ತ ಅಭಿಯಾನ ಕಾರ್ಯಕ್ರಮದ ಭಾಗವಾಗಿ ಕಾರಟಗಿ ಪುರಸಭೆಯ ಆಡಳಿತದ ಬಗ್ಗೆ ಸಾರ್ವಜನಿಕರಿಂದ ಕೇಳಿ ಬಂದಿರುವ ಆರೋಪಗಳ ಕುರಿತು ಮತ್ತು ಕಚೇರಿಯ ಸಿಬ್ಬಂದಿಯ ಪಾರದರ್ಶಕ ಆಡಳಿತದ ಕುರಿತು ಪುರಸಭೆಯ ಮುಖ್ಯ ಅಧಿಕಾರಿಗಳಿಗೆ ಮನವಿ ಸಲ್ಲಿಸಲು ಬಂದಿರುವ ಸಂದರ್ಭದಲ್ಲಿ ಮುಖ್ಯ ಅಧಿಕಾರಿ ಸಾಬಣ್ಣ ಕಟ್ಟಿಕಾರ್ ಅವರು ಕೆ ಆರ್ ಎಸ್ ಪಕ್ಷದ ಸೈನಿಕರಿಗೆ ಸರಿಯಾಗಿ ಉತ್ತರಿಸದೆ ಬೇಜವಾಬ್ದಾರಿತನದ ವರ್ತನೆ ಕೆ ಆರ್ ಎಸ್ ಪಕ್ಷ ಹಾಗೂ ಸಾರ್ವಜನಿಕರಲ್ಲಿ ಆಕ್ರೋಶವನ್ನು ಹುಟ್ಟುಹಾಕಿದೆ.

ಪುರಸಭೆ ಕಚೇರಿಯ ಮೂಲಭೂತ ಸೌಕರ್ಯಗಳು ಮತ್ತು ಪುರಸಭೆಯಿಂದ ಸಾರ್ವಜನಿಕರಿಗೆ ಸಿಗಬೇಕಾದ ಸೌಲಭ್ಯಗಳು ಪಟ್ಟಣದ ಸ್ವಚ್ಛತೆ ಹಾಗೂ ಕಚೇರಿಯ ಸಂದರ್ಭದಲ್ಲಿ ಅಧಿಕಾರಿಗಳು ಪಾಲಿಸಬೇಕಾದ ಕನಿಷ್ಠ ನಿಯಮಗಳ ಕುರಿತಂತೆ ಪ್ರಶ್ನೆಗಳನ್ನು ಕೇಳಿರುವ ಸಂದರ್ಭದಲ್ಲಿ ಸರಿಯಾಗಿ ಉತ್ತರಿಸದೆ ಮುಖ್ಯಾಧಿಕಾರಿ ಮೊಂಡುತನ ತೋರಿಸಿರುವುದು ಸಾರ್ವಜನಿಕರಲ್ಲಿ ಹಲವು ಅನುಮಾನಗಳನ್ನು ಹುಟ್ಟು ಹಾಕಿದೆ. ಕೆಆರ್ಎಸ್ ಪಕ್ಷವು ಪಟ್ಟಣದ ಸಂತೆ ಮಾರುಕಟ್ಟೆ ಪಕ್ಕದಲ್ಲಿರುವ ಚಿಕನ್ ಅಂಗಡಿಗಳ ತ್ಯಾಜ್ಯದಿಂದ ಆಗುತ್ತಿರುವ ತೊಂದರೆಗಳನ್ನು ನಿವಾರಿಸಬೇಕು. ಸಂತೆ ಮಾರುಕಟ್ಟೆ ಪಕ್ಕದಲ್ಲಿರುವ ಚರಂಡಿಯನ್ನು ಸ್ವಚ್ಛಗೊಳಿಸಬೇಕು ಸಂತೆ ಮಾರುಕಟ್ಟೆಯಲ್ಲಿನ ಅನೈರ್ಮಲ್ಯೀಕರಣದಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ.

ಆರೋಗ್ಯ ಆರೋಗ್ಯ ನಿರೀಕ್ಷಕರ ಕರ್ತವ್ಯ ಲೋಪದಿಂದಾಗಿ ಕಾರಟಗಿ ಪಟ್ಟಣದಲ್ಲಿ ಅನೈರ್ಮಲ್ಯೀಕರಣ ಸೃಷ್ಟಿಯಾಗಿದೆ. ಹಾಗೂ ಪಟ್ಟಣವನ್ನು ಸ್ವಚ್ಛವಾಗಿರಲು ಘನ ತ್ಯಾಜ್ಯ ವಿಲೇವಾರಿ ವಾಹನಗಳು ಬಹು ಮುಖ್ಯವಾಗಿದ್ದು ಆದರೆ ಘನ ತ್ಯಾಜ್ಯ ವಿಲೇವಾರಿ ವಾಹನಗಳ 05 ಜನ ಚಾಲಕರು ಕಳೆದ ಐದು ವರ್ಷದಿಂದ ನಯಾ ಪೈಸೆ ಇಲ್ಲದೆ ಕೆಲಸ ಮಾಡುತ್ತಿದ್ದಾರೆ. ಇವರನ್ನು ಟೆಂಡರ್ ಗೆ ಒಳಪಡಿಸಿ ಚಾಲಕರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ನೀಡಬೇಕು.

ಸಂತೆ ಮಾರುಕಟ್ಟೆಯಲ್ಲಿರುವ ಗ್ರಾಮೀಣ ರೈತರ ಗೋದಾಮು ಯಾವುದೇ ಸಂಘ-ಸಂಸ್ಥೆಗಳಿಗೆ ಬಾಡಿಗೆ ಕೊಡಬಾರದು ಎನ್ನುವ ನಿಯಮವಿದ್ದರೂ ಪುರಸಭೆ ಮುಖ್ಯಾಧಿಕಾರಿಗಳು ಸಂಘ ಸಂಸ್ಥೆಗಳಿಗೆ ನೀಡಿರುವುದು ಕರ್ತವ್ಯ ಲೋಪವಾಗಿದ್ದು ಕೂಡಲೇ ಸಂತೆ ಗ್ರಾಮೀಣ ಗೋಧಾಮ ರೈತರಿಗೆ ನೀಡಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮುಖ್ಯ ಅಧಿಕಾರಿ ಸಹನೆಯನ್ನು ಕಳೆದುಕೊಂಡು ಕಾನೂನು ಬದ್ಧ ಮನವಿಯನ್ನು ಸಲ್ಲಿಸಲು ಬಂದಿರುವ ಆರ್ಎಸ್ ಪಕ್ಷದ ಸೈನಿಕರ ಜೊತೆ ಜವಾಬ್ದಾರಿ ಇಲ್ಲದ ಮಾತುಗಳನ್ನಾಡಿದರು. ಅಲ್ಲದೆ ಸಿಬ್ಬಂದಿ ಅಲ್ಲದ ವ್ಯಕ್ತಿ ಒಬ್ಬರಿಗೆ ವಿಡಿಯೋ ಮಾಡಲು ಹೇಳಿರುವುದು ಆ ವ್ಯಕ್ತಿ ವಿಡಿಯೋ ಮಾಡಿರುವುದು ಮತ್ತು ಸಲ್ಲಿಸಿದ ಮನವಿಯ ಅರ್ಜಿಯನ್ನು ಸಿಬ್ಬಂದಿ ಅಲ್ಲದ ವ್ಯಕ್ತಿ ಜೊತೆ ಸ್ವೀಕೃತಿ ವಿಭಾಗಕ್ಕೆ ಕಳುಹಿಸಿರುವುದು ಮುಖ್ಯಾಧಿಕಾರಿಯ ಅಧಿಕಾರವನ್ನು ಪ್ರಶ್ನಿಸುವಂತಾಗಿದೆ.




ಸಿಬ್ಬಂದಿ ಅಲ್ಲದ ವ್ಯಕ್ತಿ ಮತ್ತು ಮುಖ್ಯಾಧಿಕಾರಿಯ ನಡುವಿನ ಸಂಬಂಧ ಏನು ಸ್ಪಷ್ಟಪಡಿಸಬೇಕಿದೆ. ಕೆ ಆರ್ ಎಸ್ ಪಕ್ಷ ಕೇಳಿದ ಪ್ರತಿಯೊಂದು ಪ್ರಶ್ನೆಗೂ ಮುಖ್ಯಾಧಿಕಾರಿ ಲಿಖಿತವಾಗಿ ಉತ್ತರ ನೀಡುತ್ತೇನೆ. ಲಿಖಿತವಾಗಿ ಉತ್ತರ ನೀಡುತ್ತೇನೆ ಎಂದು ಪದೇ ಪದೇ ಉಚ್ಚರಿಸುತ್ತಾ ಜಾರಿಕೊಳ್ಳುವ ಪ್ರಯತ್ನ ಮಾಡಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧ್ಯಕ್ಷರಾದ ನಿರುಪಾದಿ ಗೋಮರ್ಷಿಯವರು ಅಧಿಕಾರಿಯ ನಡೆಯನ್ನು ಪ್ರಶ್ನಿಸಿದ್ದಾರೆ ಕಚೇರಿಯ ಸಾರ್ವಜನಿಕರ ಅದೆಷ್ಟು ಮನವಿಗಳಿಗೆ ನೀವು ಲಿಖಿತವಾಗಿ ಉತ್ತರಿಸಿದ್ದೀರಿ.

ಸಾರ್ವಜನಿಕರ ಅದೆಷ್ಟು ದೂರುಗಳಿಗೆ ನೀವು ಲಿಖಿತವಾಗುತ್ತರಿಸಿದ್ದೀರಿ ಮಾಹಿತಿ ಪಡೆದೆ ತೀರುತ್ತೇವೆ ಒಂದು ವಾರ ಅವಧಿಯೊಳಗೆ ನಮ್ಮ ಮನವಿಯಲ್ಲಿನ ಅರ್ಜಿಗಳ ಕುರಿತು ಲಿಖಿತವಾಗಿ ಉತ್ತರಿಸದಿದ್ದರೆ ಕೆ ಆರ್ಎಸ್ ಪಕ್ಷ ನಿರಂತರ ಹೋರಾಟ ಮಾಡುತ್ತದೆ. ಪುರಸಭೆ ವ್ಯಾಪ್ತಿಯಲ್ಲಿ ಎಷ್ಟೇ ಅಕ್ರಮಗಳನ್ನು ಮುಚ್ಚಿಡಲು ಇವರು ಪ್ರಯತ್ನಪಟ್ಟರು ಕೂಡ ಕೆಆರ್ಎಸ್ ಪಕ್ಷ ಬಯಲಿಗೆಳೆಯುತ್ತದೆ ಎಂದು ಸಾರ್ವಜನಿಕ ಹಿತಾಸಕ್ತಿಯ ಜವಾಬ್ದಾರಿಯನ್ನು ತೋರಿದ್ದಾರೆ.

## ಪರಮಾಣು ಬಾಂಬ್ ಇಂಧನ ಉತ್ಪಾದಿಸಲು ಮುಂದಾದ ಉತ್ತರ ಕೊರಿಯಾ

ಅ.ಶ. ಸುದ್ದಿ ಸಿಯೋಲ್

**ಸಿಯೋಲ್: ಉತ್ತರ ಕೊರಿಯಾ ಇಂದು ಪರಮಾಣು ಬಾಂಬ್ ಇಂಧನವನ್ನು ಉತ್ಪಾದಿಸಲು ಹೊಸ ಸೌಲಭ್ಯವನ್ನು ಅನಾವರಣಗೊಳಿಸಿತು. ಕೊರಿಯಾದ ನಾಯಕ ಕಿಮ್ ಜಾಂಗ್ ಉನ್ ದೇಶದ ಪರಮಾಣು ಪಡೆಗಳನ್ನು ಘಾತೀಯ ದರದಲ್ಲಿ ಬಲಪಡಿಸುವ ಯೋಜನೆಗಳನ್ನು ಘೋಷಿಸಿದರು.**



ದಕ್ಷಿಣ ಕೊರಿಯಾದ ಜಂಟಿ ಮುಖ್ಯಸ್ಥರು ಈ ಸ್ಥಳವನ್ನು ಯುರೇನಿಯಂ ಪುಷ್ಟೀಕರಣ ಸೌಲಭ್ಯವೆಂದು ಗುರುತಿಸಿದ್ದಾರೆ ಮತ್ತು ಉತ್ತರ ಕೊರಿಯಾದ ಪರಮಾಣು ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಅವರು ಅಮೆರಿಕದೊಂದಿಗೆ ನಿಕಟವಾಗಿ ಸಮನ್ವಯ ಸಾಧಿಸುತ್ತಿದ್ದಾರೆ ಎಂದು ಹೇಳಿದರು. ದಕ್ಷಿಣದ ಮಿಲಿಟರಿ ತಕ್ಷಣವೇ ಹೆಚ್ಚಿನ ವಿವರಗಳನ್ನು ಬಿಡುಗಡೆ ಮಾಡಲಿಲ್ಲ. ಈ ಸೌಲಭ್ಯವು ಹೆಚ್ಚು ಸುಧಾರಿತ ತಂತ್ರಜ್ಞಾನವನ್ನು ಬಳಸಿದೆ ಎಂದು ಉತ್ತರದ ಅಧಿಕೃತ ಕೊರಿಯನ್ ಸೆಂಟ್ರಲ್ ನ್ಯೂಸ್ ಏಜೆನ್ಸಿ ಹೇಳಿದೆ ಆದರೆ ಹೆಚ್ಚಿನ ವಿವರಗಳನ್ನು ನೀಡಿಲ್ಲ. ಸ್ಥಾವರ ಎಲ್ಲಿದೆ ಅಥವಾ ಅದು ಯಾವಾಗ ಕಾರ್ಯಾಚರಣೆಯನ್ನು ಪ್ರಾರಂಭಿಸಿತು ಎಂಬುದು ಸ್ಪಷ್ಟವಾಗಿಲ್ಲ. ಶಸ್ತ್ರಾಸ್ತ್ರ-ದರ್ಜೆಯ ಯುರೇನಿಯಂ ಅನ್ನು ಪುನರುಜ್ಜೀವನಗೊಳಿಸಲು ಅಗತ್ಯವಿರುವ ಕೇಂದ್ರಾಪಗಾಮಿಗಳನ್ನು ಹೊಂದಿರುವ ದೊಡ್ಡ ಹಾಲ್ ಅನ್ನು ರಾಜ್ಯ ಮಾಧ್ಯಮ ಫೋಟೋಗಳು ತೋರಿಸಿವೆ. ಹೊಸ ಕಾರ್ಖಾನೆಯ ಬಹಿರಂಗಪಡಿಸುವಿಕೆಯು ಬೆಳೆಯುತ್ತಿರುವ ಯು-ಎಸ್ ನೇತೃತ್ವದ ಮಿಲಿಟರಿ ಬೆದರಿಕೆಗಳನ್ನು ಎದುರಿಸಲು ತನ್ನ ಪರಮಾಣು ಶಸ್ತ್ರಾಸ್ತ್ರಗಳ ಕಾರ್ಯಕ್ರಮವನ್ನು ವಿಸ್ತರಿಸಲು ಕಿಮ್ ಅವರ ಪುನರಾವರ್ತಿತ ಪ್ರತಿಜ್ಞೆಗಳಿಗೆ ಅನುಗುಣವಾಗಿದೆ. ಅಣು ಸೌಲಭ್ಯದ ಕಾರ್ಯಾಚರಣೆಗಳು ಮತ್ತು ಅದರ ದೀರ್ಘಕಾಲೀನ ಉತ್ಪಾದನಾ ಯೋಜನೆಯ ಬಗ್ಗೆ ತಿಳಿದುಕೊಳ್ಳಲು ಕಿಮ್ ಬುಧವಾರ ಪರಮಾಣು ಸೌಲಭ್ಯಕ್ಕೆ ಭೇಟಿ ನೀಡಿದ್ದಾರೆ ಎಂದು ಕೆಸಿಎನ್ಎ ಹೇಳಿದೆ. ಅತ್ಯಂತ ಭೀಕರ ಶತ್ರುವಿನೊಂದಿಗಿನ ಮುಖಾಮುಖಿಗಳಿಂದಾಗಿ, ದೇಶದ ಪರಮಾಣು ಸಿಡಿತಲೆಗಳನ್ನು ಗುಣಮಟ್ಟ ಮತ್ತು ಪ್ರಮಾಣದಲ್ಲಿ ಬಲಪಡಿಸುವ ತುರ್ತು ಹೆಚ್ಚಾಗಿದೆ ಎಂದು ಕಿಮ್ ಹೇಳಿರುವುದಾಗಿ ಅದು ಉಲ್ಲೇಖಿಸಿದೆ. ಇದು ಯುನೈಟೆಡ್ ಸ್ಟೇಟ್ಸ್ ಮತ್ತು ದಕ್ಷಿಣ ಕೊರಿಯಾವನ್ನು ಸ್ಪಷ್ಟವಾಗಿ ಉಲ್ಲೇಖಿಸುತ್ತಿತ್ತು. ಉತ್ತರ ಕೊರಿಯಾದ ಪರಮಾಣು ಸಾಮರ್ಥ್ಯಗಳನ್ನು ಹೆಚ್ಚಿಸಲು ಕಿಮ್ ಇತರ ಅನಿರ್ದಿಷ್ಟ ಬೆದರಿಕೆಗಳು ಮತ್ತು ಬಿಕ್ಕಟ್ಟುಗಳನ್ನು ಕಾರಣವೆಂದು ಉಲ್ಲೇಖಿಸಿದ್ದಾರೆ ಎಂದು ಅದು ಹೇಳಿದೆ. ಐದು ವರ್ಷಗಳ ಹಿಂದಿನದಕ್ಕೆ ಹೋಲಿಸಿದರೆ ಉತ್ತರ ಕೊರಿಯಾದ ಶಸ್ತ್ರಾಸ್ತ್ರ ದರ್ಜೆಯ ಪರಮಾಣು ಸಾಮಗ್ರಿ ಉತ್ಪಾದನಾ ಸಾಮರ್ಥ್ಯವು ದ್ವಿಗುಣಗೊಂಡಿದೆ

# ಲಾಭದ ಮೇಲಿನ ತೆರಿಗೆಯನ್ನು ಸಂಪೂರ್ಣವಾಗಿ ರದ್ದುಪಡಿಸಲಾಗಿದೆ.

ಅ.ಶ. ಸುದ್ದಿ ನವದೆಹಲಿ

**ನವದೆಹಲಿ: ದೇಶದ ಆರ್ಥಿಕತೆಗೆ ಉತ್ತೇಜನ ನೀಡುವ ಮತ್ತು ಭಾರತೀಯ ಸರ್ಕಾರಿ ಬಾಂಡ್‌ಗಳಲ್ಲಿ ಹೂಡಿಕೆ ಮಾಡುವ ವಿದೇಶಿ ಹೂಡಿಕೆದಾರರಿಗೆ ಬಂಡವಾಳ ಲಾಭದ ಮೇಲಿನ ತೆರಿಗೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಪ್ರಧಾನಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.**

ಇರಾನ್ ಸಂಘರ್ಷ ಮತ್ತು ಕಚ್ಚಾ ತೈಲ ಬೆಲೆ ಏರಿಕೆಯಿಂದಾಗಿ ಭಾರತೀಯ ರೂಪಾಯಿ ಮೌಲ್ಯದ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಮತ್ತು ದೇಶದ ಸಾಲ ಮಾರುಕಟ್ಟೆಗೆ ವಿದೇಶಿ ಬಂಡವಾಳವನ್ನು ಆಕರ್ಷಿಸಲು ಕೇಂದ್ರ ಸರ್ಕಾರ ಈ ದಿಟ್ಟ ಹೆಜ್ಜೆ ಇಟ್ಟಿದೆ. ಆದಾಯ ತೆರಿಗೆ ಕಾಯ್ದೆಯನ್ನು ತಿದ್ದುಪಡಿ ಮಾಡುವ ಸುಗ್ರೀವಾಜ್ಞೆಯನ್ನು ಸಂಪುಟ ಅನುಮೋದಿಸಿದೆ, ಇದು ರಾಷ್ಟ್ರಪತಿಗಳು ಸಹಿ ಮಾಡಿದ ತಕ್ಷಣ ಜಾರಿಗೆ ಬರಲಿದೆ. ಪ್ರಸ್ತುತ ನಿಯಮ ಏನಾಗಿತ್ತು: ಪ್ರಸ್ತುತ ನಿಯಮಗಳ ಪ್ರಕಾರ, ವಿದೇಶಿ ಬಂಡವಾಳ ಹೂಡಿಕೆದಾರರು




ಪಟ್ಟಿಮಾಡಿದ ಷೇರುಗಳು ಮತ್ತು 12 ತಿಂಗಳುಗಳಿಗಿಂತ ಹೆಚ್ಚು ಕಾಲ ಹೊಂದಿರುವ ಬಾಂಡ್‌ಗಳ ಮೇಲೆ 12.5 ಪ್ರತಿಶತದಷ್ಟು ದೀರ್ಘಾವಧಿಯ ಬಂಡವಾಳ ಲಾಭದ ತೆರಿಗೆಯನ್ನು ಪಾವತಿಸಬೇಕಾಗಿತ್ತು.

ಆದರೆ ಹೊಸ ನಿರ್ಧಾರದ ಪ್ರಕಾರ, ಸರ್ಕಾರಿ ಬಾಂಡ್‌ಗಳ ಮೇಲಿನ ಈ ತೆರಿಗೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಲಾಗಿದೆ. ಇದರೊಂದಿಗೆ, ಬಾಂಡ್‌ಗಳ ಮೇಲಿನ ಬಡ್ಡಿ ಆದಾಯವನ್ನು 12 ಪ್ರತಿಶತದಷ್ಟು ವಿಧಿಸಲಾಯಿತು. ವಿದೇಶಿ ತೆರಿಗೆ ಹೊರೆಯ 20 ಪ್ರತಿಶತಕ್ಕೆ ಪರಿಹಾರವನ್ನು ನೀಡಲು ಸರ್ಕಾರವು ಪರಿಗಣಿಸುತ್ತಿದೆ. ಜಾಗತಿಕ ರಾಜಕೀಯ ಬಿಕ್ಕಟ್ಟು ಮತ್ತು ಏರುತ್ತಿರುವ ತೈಲ ಬೆಲೆಗಳ ನಡುವೆ, ವಿದೇಶಿ ಹೂಡಿಕೆದಾರರು 2026 ರಲ್ಲಿ ಭಾರತೀಯ ಷೇರು ಮಾರುಕಟ್ಟೆಯಿಂದ ಸುಮಾರು 2.5 ಲಕ್ಷ ಕೋಟಿ ರೂ.ಗಳನ್ನು ಹಿಂತೆಗೆದುಕೊಂಡರು.

ಇದು ಭಾರತದ ಇತಿಹಾಸದಲ್ಲಿಯೇ ಅತಿ ದೊಡ್ಡ ಹೊರಹರಿವುಗಳಲ್ಲಿ ಒಂದಾಗಿದೆ. ಈ ಸಂದರ್ಭದಲ್ಲಿ, ಈ ಸುಧಾರಣೆಯು ರೂಪಾಯಿ ಅಪಮೌಲ್ಯಗೊಳ್ಳುವುದನ್ನು ತಡೆಯಲು ಸಹಾಯ ಮಾಡುತ್ತದೆ ಎಂದು ಹೇಳಲಾಗುತ್ತದೆ. ಡಾಲರ್ ಒಳಹರಿವು: ಈ ರಿಯಾಯಿತಿಯು ಜಾಗತಿಕ ಮಾರುಕಟ್ಟೆಯಲ್ಲಿ ಭಾರತೀಯ ಬಾಂಡ್‌ಗಳನ್ನು ಹೆಚ್ಚು ಆಕರ್ಷಕವಾಗಿಸುತ್ತದೆ, ಇದು ದೇಶಕ್ಕೆ ಡಾಲರ್‌ಗಳ ಹರಿವನ್ನು ಹೆಚ್ಚಿಸುತ್ತದೆ. ಪರಿಣಾಮವಾಗಿ, ರೂಪಾಯಿ ಮೇಲಿನ ಒತ್ತಡ ಕಡಿಮೆಯಾಗುತ್ತದೆ ಮತ್ತು ವಿದೇಶಿ ಬಂಡವಾಳದ ಒಳಹರಿವು ಹೆಚ್ಚಾದಂತೆ ಅದರ ಮೌಲ್ಯವು ಸ್ಥಿರಗೊಳ್ಳುತ್ತದೆ.

ಕಚ್ಚಾ ತೈಲ ಬೆಲೆಗಳ ಏರಿಕೆಯಿಂದ ಉಂಟಾಗಬಹುದಾದ ಚಾಲ್ತಿ ಖಾತೆ ಕೊರತೆ ಮತ್ತು ಹಣದುಬ್ಬರದ ಭಯವನ್ನು ನಿಭಾಯಿಸಲು ಈ ಕ್ರಮವು ಸಹಾಯ ಮಾಡುತ್ತದೆ. ವಿದೇಶಿ ಹೂಡಿಕೆದಾರರನ್ನು ಆಕರ್ಷಿಸಲು ರಿಸರ್ವ್ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರವು ಮುಂದಿನ ದಿನಗಳಲ್ಲಿ ಹೆಚ್ಚಿನ ಸುಧಾರಣಾ ಕ್ರಮಗಳನ್ನು ಘೋಷಿಸುವ ಸಾಧ್ಯತೆಯಿದೆ ಎಂದು ಮಾರುಕಟ್ಟೆ ತಜ್ಞರು ಅಂದಾಜಿಸಿದ್ದಾರೆ.

# ಭಕ್ತರ ವಿಶ್ರಾಂತಿ ತಾಣವೇ ಪಾರ್ಕಿಂಗ್ ಕೇಂದ್ರ!

ಅ.ಶ. ಸುದ್ದಿ ಗಾಣಗಾಪೂರ

**ದೇವಲ ಗಾಣಗಾಪೂರ: ರಾಜ್ಯದ ಪ್ರಸಿದ್ಧ ದತ್ತಾತ್ರೇಯ ಕ್ಷೇತ್ರವಾದ ದೇವಲ ಗಾಣಗಾಪೂರಕ್ಕೆ ಪ್ರತಿದಿನ ಸಾವಿರಾರು ಭಕ್ತರು ಆಗಮಿಸುತ್ತಾರೆ. ಆದರೆ ಭಕ್ತರ ಅನುಕೂಲಕ್ಕಾಗಿ ನಿರ್ಮಿಸಲಾಗಿದ್ದ ವಿಶ್ರಾಂತಿ ತಾಣಗಳು ಇದೀಗ ವಾಹನಗಳ ಪಾರ್ಕಿಂಗ್ ಕೇಂದ್ರಗಳಾಗಿ ಮಾರ್ಪಟ್ಟಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.**

ದೇವಸ್ಥಾನ ಪರಿಸರದಲ್ಲಿ ಬಿಸಿಲು ಮತ್ತು ಮಳೆಯಿಂದ ರಕ್ಷಣೆ ಪಡೆಯಲು ನಿರ್ಮಿಸಲಾದ ಶೆಡ್‌ಗಳ ಅಡಿಯಲ್ಲಿ ದ್ವಿಚಕ್ರ ವಾಹನಗಳನ್ನು ನಿಲ್ಲಿಸಲಾಗುತ್ತಿದ್ದು, ಭಕ್ತರಿಗೆ ವಿಶ್ರಾಂತಿ ಪಡೆಯಲು ಸ್ಥಳದ ಕೊರತೆ ಎದುರಾಗಿದೆ. ದೂರದ ಊರುಗಳಿಂದ ಆಗಮಿಸುವ ಹಿರಿಯ ನಾಗರಿಕರು, ಮಹಿಳೆಯರು ಹಾಗೂ ಮಕ್ಕಳು ಕುಳಿತುಕೊಳ್ಳಲು ನೆರಳಿನ ಸ್ಥಳವಿಲ್ಲದೆ ಪರದಾಡುವಂತಾಗಿದೆ. ಸ್ಥಳೀಯರ ಪ್ರಕಾರ, ದೇವಸ್ಥಾನ ಸುತ್ತಮುತ್ತಲಿನ



ವಾಹನ ಸಂಚಾರ ನಿಯಂತ್ರಣ ಹಾಗೂ ಪಾರ್ಕಿಂಗ್ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಮುಜರಾಯಿ ಇಲಾಖೆ ಮತ್ತು ಪೊಲೀಸ್ ಇಲಾಖೆ ವಿಫಲವಾಗಿವೆ. ಭಕ್ತರಿಗಾಗಿ ನಿರ್ಮಿಸಲಾದ ವಿಶ್ರಾಂತಿ ತಾಣಗಳನ್ನೇ ವಾಹನಗಳು ಆಕ್ರಮಿಸಿಕೊಂಡಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿರುವುದು ಟೀಕೆಗೆ ಗುರಿಯಾಗಿದೆ.

ಹುಣ್ಣಿಮೆ, ಅಮಾವಾಸ್ಯೆ ಹಾಗೂ ವಿಶೇಷ ಉತ್ಸವಗಳ ಸಂದರ್ಭದಲ್ಲಿ ಭಕ್ತರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತದೆ. ಈ ವೇಳೆ ಸಮಸ್ಯೆ ಮತ್ತಷ್ಟು ಗಂಭೀರ ಸ್ವರೂಪ ಪಡೆಯುತ್ತಿದ್ದು, ವಿಶ್ರಾಂತಿ ತಾಣಗಳಲ್ಲಿ ಭಕ್ತರಿಗಿಂತ ವಾಹನಗಳೇ ಹೆಚ್ಚು ಕಂಡುಬರುವ ಪರಿಸ್ಥಿತಿ ನಿರ್ಮಾಣವಾಗಿದೆ. "ಭಕ್ತರ ಅನುಕೂಲಕ್ಕಾಗಿ ನಿರ್ಮಿಸಿದ ತಾಣಗಳನ್ನು ವಾಹನಗಳ ಪಾರ್ಕಿಂಗ್ ಕೇಂದ್ರಗಳಾಗಿ ಬಳಸುವುದು ಎಷ್ಟು ಸರಿ?" ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿ, ವಿಶ್ರಾಂತಿ ತಾಣಗಳನ್ನು ಭಕ್ತರ ಬಳಕೆಗೆ ಮುಕ್ತಗೊಳಿಸುವಂತೆ ಭಕ್ತರು ಜಿಲ್ಲಾಡಳಿತ, ಮುಜರಾಯಿ ಇಲಾಖೆ ಹಾಗೂ ಪೊಲೀಸ್ ಇಲಾಖೆಗೆ ಆಗ್ರಹಿಸಿದ್ದಾರೆ. ತ್ವರಿತ ಕ್ರಮಕ್ಕೆ ಒತ್ತಾಯ ದೇವಲ ಗಾಣಗಾಪೂರಕ್ಕೆ ರಾಜ್ಯ ಸೇರಿದಂತೆ ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ಆಗಮಿಸುತ್ತಾರೆ. ಇಂತಹ ಪವಿತ್ರ ಕ್ಷೇತ್ರದಲ್ಲಿ ಮೂಲಭೂತ ಸೌಲಭ್ಯಗಳ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡಬೇಕಿದ್ದು,

ಭಕ್ತರ ವಿಶ್ರಾಂತಿ ತಾಣಗಳನ್ನು ಸಂರಕ್ಷಿಸಿ ಅವರಿಗೆ ಅನುಕೂಲವಾಗುವ ವಾತಾವರಣ ಕಲ್ಪಿಸುವುದು ಸಂಬಂಧಪಟ್ಟ ಇಲಾಖೆಗಳ ಜವಾಬ್ದಾರಿಯಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.ಉಪಶೀರ್ಷಿಕೆಗಳ ಆಯ್ಕೆಗಳು: ಭಕ್ತರಿಗಾಗಿ ನಿರ್ಮಿಸಿದ ಶೆಡ್‌ಗಳಲ್ಲಿ ವಾಹನಗಳ ದರ್ಬಾರ್ ಹಿರಿಯ ನಾಗರಿಕರು, ಮಹಿಳೆಯರಿಗೆ ಕುಳಿತುಕೊಳ್ಳಲು ಸ್ಥಳವಿಲ್ಲ ಪಾರ್ಕಿಂಗ್ ವ್ಯವಸ್ಥೆ ಕೊರತೆಯಿಂದ ಹೆಚ್ಚಿದ ಅವ್ಯವಸ್ಥೆ ಮುಜರಾಯಿ?ಪೊಲೀಸ್ ಇಲಾಖೆಗಳ ವಿರುದ್ಧ ಸಾರ್ವಜನಿಕರ ಅಸಮಾಧಾನ

# ಶಿಡ್ಲಘಟ್ಟದಲ್ಲಿ ಜೂನ್ 10ಕ್ಕೆ ಸಿಎಂ ಡಿ.ಕೆ. ಶಿವಕುಮಾರ್ ಅಭಿನಂದನಾ ಸಮಾರಂಭ.

## ಚುನಾವಣೆಗಳಿಗೆ ಒಗ್ಗಟ್ಟಿನಿಂದ ಸಿದ್ಧರಾಗಲು ಕಾರ್ಯಕರ್ತರಿಗೆ ಬಿ.ವಿ. ರಾಜೀವ್ ಗೌಡ ಕರೆ.

ಅ.ಶ. ಸುದ್ದಿ ಶಿಡ್ಲಘಟ್ಟ

ಶಿಡ್ಲಘಟ್ಟ: ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಸೇರಿದಂತೆ ಅನೇಕ ಶಾಸಕರು ಮಂತ್ರಿ ಸ್ಥಾನ ಪಡೆದಿರುವ ಹಿನ್ನೆಲೆಯಲ್ಲಿ ಅವರಿಗೆಲ್ಲರಿಗೂ ಹಮ್ಮಿಕೊಳ್ಳಲಾಗಿದ್ದ ಬೃಹತ್ ಅಭಿನಂದನಾ ಸಮಾರಂಭವನ್ನು ಅನಿವಾರ್ಯ ಕಾರಣಗಳಿಂದ ಮುಂದಿನ ಬುಧವಾರಕ್ಕೆ ಮುಂದೂಡಲಾಗಿದೆ ಎಂದು ಕಾಂಗ್ರೆಸ್ ಮುಖಂಡ ಹಾಗೂ ಎಬಿಡಿ ಗ್ರೂಪ್ ಟ್ರಸ್ಟ್ ಅಧ್ಯಕ್ಷ ಬಿ.ವಿ. ರಾಜೀವ್ ಗೌಡ ಅವರು ತಿಳಿಸಿದರು.

ಭಾನುವಾರ ಆಯೋಜನೆಗೊಂಡಿದ್ದ ಈ ಕಾರ್ಯಕ್ರಮದ ರೂಪರೇಷೆಗಳ ಕುರಿತು ಗುರುವಾರದಂದು ಶಿಡ್ಲಘಟ್ಟ ನಗರದ ಕಾಂಗ್ರೆಸ್ ಭವನದಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಪದಗ್ರಹಣ ಮಾಡಿದ ಸಂಭ್ರಮಕ್ಕಾಗಿ ಜೂನ್ 10ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಶಿಡ್ಲಘಟ್ಟದ ಕಾಂಗ್ರೆಸ್ ಭವನದಲ್ಲಿ ಬೃಹತ್ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭದಲ್ಲಿ ಸಾರ್ವಜನಿಕರು ಹಾಗೂ ಕಾರ್ಯಕರ್ತರು ಸೇರಿದಂತೆ ಸುಮಾರು 10 ಸಾವಿರ ಜನರಿಗೆ ವಿಶೇಷ ಊಟದ ವ್ಯವಸ್ಥೆ ಮಾಡಲಾಗಿದ್ದು, 1 ಟನ್ ಮಟನ್ ಹಾಗೂ 1 ಟನ್ ಚಿಕನ್ ಸೇರಿದಂತೆ ಭರ್ಜರಿ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಪ್ರತಿ ಪಂಚಾಯಿತಿಯಿಂದ 200ಕ್ಕೂ ಅಧಿಕ ಸಂಖ್ಯೆಯಲ್ಲಿ ನಾಯಕರು, ಕಾರ್ಯಕರ್ತರು ಮತ್ತು ಸಾರ್ವಜನಿಕರು ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು. ಈ ಕಾರ್ಯಕ್ರಮದ ಮುಕ್ತಾಯದ ನಂತರ ನೂತನ ಮುಖ್ಯಮಂತ್ರಿಗಳನ್ನು ಖುದ್ದಾಗಿ ಭೇಟಿಯಾಗಿ ಅಭಿನಂದನೆ ಸಲ್ಲಿಸುವ ಯೋಜನೆ ರೂಪಿಸಲಾಗಿದೆ ಎಂದು ಅವರು ವಿವರಿಸಿದರು. ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ರಣಕಹಳೆ:



ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಾದ್ಯಂತ ಮುಂಬರುವ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ಚುನಾವಣೆಗಳಿಗೆ ಕಾಂಗ್ರೆಸ್ ಕಾರ್ಯಕರ್ತರು ಈಗಿನಿಂದಲೇ ಸನ್ನದ್ಧರಾಗಬೇಕು.

ಕ್ಷೇತ್ರದ ಒಟ್ಟು 28 ಗ್ರಾಮ ಪಂಚಾಯತಿಗಳಲ್ಲೂ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ನಾವೆಲ್ಲರೂ ವೈಯಕ್ತಿಕ ಭಿನ್ನಾಭಿಪ್ರಾಯ ಮರೆತು ಒಗ್ಗಟ್ಟಾಗಿ ಶ್ರಮಿಸಬೇಕು ಎಂದು ರಾಜೀವ್ ಗೌಡ ಕರೆ ನೀಡಿದರು. ಇದೇ ವೇಳೆ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಮಾತನಾಡಿದ ರಾಜೀವ್ ಗೌಡ ಅವರು, ಚುನಾವಣಾ ಆಯೋಗದಿಂದ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ (SSR) ಪ್ರಕ್ರಿಯೆ ಆರಂಭವಾಗಲಿದ್ದು, ಸಾರ್ವಜನಿಕರು ಗ್ರಾಮೀಣ ಮಟ್ಟದಲ್ಲಿ ಮತದಾರರ ಪಟ್ಟಿಯನ್ನು ಸೂಕ್ತವಾಗಿ ಪರಿಶೀಲಿಸಬೇಕು. ಅಗತ್ಯ ದಾಖಲೆಗಳನ್ನು ಸಕಾಲದಲ್ಲಿ ಸಲ್ಲಿಸಿ ತಮ್ಮ ಹೆಸರು ಪಟ್ಟಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಸಾರ್ವಜನಿಕರ ಈ ಪ್ರಕ್ರಿಯೆಗೆ ಮತ್ತು ಎಸ್ ಐ ಆರ್ ಗಳಿಗೆ ಸ್ಪಂದಿಸದ ಬಿಎಲ್ಒಗಳ (BLO) ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಎಚ್ಚರಿಸಿದರು. ರಾಜೀವ್ ಗೌಡ ನಮ್ಮ ಪ್ರಮುಖ ನಾಯಕ – ಡಾಲ್ಫಿನ್ ನಾಗರಾಜ್: ಸಭೆಯಲ್ಲಿ ಉಪಸ್ಥಿತರಿದ್ದ ಕಾಂಗ್ರೆಸ್ ಮುಖಂಡ ಡಾಲ್ಫಿನ್ ನಾಗರಾಜ್ ಮಾತನಾಡಿ,

"ಶಿಡ್ಲಘಟ್ಟ ಕಾಂಗ್ರೆಸ್‌ನಲ್ಲಿ ಎಷ್ಟೇ ಬಣಗಳಿದ್ದರೂ, ನಮ್ಮ ಪ್ರಮುಖ ನಾಯಕ ಬಿ.ವಿ. ರಾಜೀವ್ ಗೌಡ ಅವರೇ ಆಗಿದ್ದಾರೆ. ಯಾವುದೋ ಸಣ್ಣ ವಿಷಯಕ್ಕೆ ಅವರು ಪಕ್ಷದಿಂದ ಅಮಾನತುಗೊಂಡಿರುವ ಆದೇಶವನ್ನು ಹೈಕಮಾಂಡ್ ಶೀಘ್ರದಲ್ಲೇ ಹಿಂಪಡೆಯುವ ಪೂರ್ಣ ವಿಶ್ವಾಸವಿದೆ. ಒಂದು ವೇಳೆ ವಿಳಂಬವಾದರೆ, ಇಲ್ಲಿನ ಎಲ್ಲಾ ನಿಷ್ಠಾವಂತ ಕಾರ್ಯಕರ್ತರು ಒಟ್ಟಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಬಳಿ ನೇರವಾಗಿ ಮಾತನಾಡಿ, ಗೌರವಪೂರ್ವಕವಾಗಿ ಅವರನ್ನು ಪಕ್ಷಕ್ಕೆ ಮರಳಿ ಕರೆತರಲಿದ್ದೇವೆ" ಎಂದು ದೃಢ ವಿಶ್ವಾಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಸಹನಾ ರಾಜೀವ್ ಗೌಡ, ನಗರಸಭೆ ಮಾಜಿ ಅಧ್ಯಕ್ಷ ಅಫ್ಸರ್ ಪಾಷಾ, ಪ್ರಮುಖರಾದ ಬ್ಯಾಟರಾಯ ಶೆಟ್ಟಿ, ಕಂಪನಿ ದೇವರಾಜ್, ಡಿ.ಪಿ. ನಾಗರಾಜ್, ತಿಮ್ಮನಾಯಕನಹಳ್ಳಿ ಆನಂದಪ್ಪ, ಅಶ್ವಥ್ ರೆಡ್ಡಿ, ಗುಡಿಹಳ್ಳಿ ನಾರಾಯಣಸ್ವಾಮಿ, ಟಿ. ಎಸ್. ಗೋಪಾಲ್ ರೆಡ್ಡಿ, ಪ್ರದೀಪ್ ಕುಮಾರ್ ಸೇರಿದಂತೆ ನೂರಾರು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka